ಸಿರಿ ಕನ್ನಡ ನುಡಿ ಬಳಗ, ಕರ್ನಾಟಕ ರಾಜ್ಯ

# ಎಸ್. ಎಸ್. ಎಲ್. ಸಿ. ಸಾರ್ವತ್ರಿಕ ಪರೀಕ್ಷೆ – 2021

# ಪ್ರಥಮ ಭಾಷೆ ಕನ್ನಡ

## ಮಾದರಿ ನೀಲನಕಾಶೆ ಮತ್ತು ಪ್ರಶ್ನೆ ಪತ್ರಿಕೆ




– : ರಚನೆ : –

**ರವೀಶ್ ಕುಮಾರ್ ಬಿ.**

ರಾಜ್ಯ ಸಂಪನ್ಮೂಲ ವ್ಯಕ್ತಿಗಳು

# 2905, ಹೊನ್ನಸಿರಿ,

3 ನೆಯ ತಿರುವು, 'ಎಫ್' ಬ್ಲಾಕ್,

ಕನಕದಾಸ ನಗರ, ಮೈಸೂರು – 570033

**ಅಲೆಯುಲಿ ಎಣಿಕೆ : 9448958498**

ಸಿರಿ ಕನ್ನಡ ನುಡಿ ಬಳಗ, ಕರ್ನಾಟಕ ರಾಜ್ಯ

# ಎಸ್. ಎಸ್. ಎಲ್. ಸಿ. ಸಾರ್ವತ್ರಿಕ ಪರೀಕ್ಷೆ – 2021

## ಪ್ರಥಮ ಭಾಷೆ ಕನ್ನಡ

# ಮಾದರಿ ನೀಲನಕಾಶೆ ಮತ್ತು ಪ್ರಶ್ನೆ ಪತ್ರಿಕೆ

## ಪರಿವಿಡಿ


| ಹಂತದ ಸಂಖ್ಯೆ | ಹಂತದ ಹೆಸರು | ಪುಟ ಸಂಖ್ಯೆ ಇಂದ | ಪುಟ ಸಂಖ್ಯೆ ವರೆಗೆ |
|---|---|---|---|
| 1 | ಉದ್ದಿಷ್ಟವನ್ನು ಆಧರಿಸಿ, ಶೇಕಡವಾರು ಅಂಕ ಹಂಚಿಕೆ. | 3 | 3 |
| 2 | ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ, ಶೇಕಡವಾರು ಅಂಕ ಹಂಚಿಕೆ | 3 | 3 |
| 3 | ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ, ಶೇಕಡವಾರು ಅಂಕ ಹಂಚಿಕೆ | 3 | 3 |
| 4 | ಪಠ್ಯಾಂಶಗಳನ್ನು ಆಧರಿಸಿ, ಶೇಕಡವಾರು ಅಂಕ ಹಂಚಿಕೆ. | 4 | 4 |
| 5 | ನೀಲ ನಕಾಶೆ | 5 | 6 |
| 6 | ಪ್ರಶ್ನೆ ಪತ್ರಿಕೆ | 7 | 10 |
| 7 | ಮೌಲ್ಯಾಂಶ / ಉತ್ತರ ಸೂಚಿ ಮತ್ತು ಅಂಕ ವಿತರಣೆ | 11 | 23 |
| 8 | ಪ್ರಶ್ನಾನುಸಾರ ವಿಶ್ಲೇಷಣೆ | 24 | 25 |

# ಪ್ರಥಮ ಭಾಷೆ ಕನ್ನಡ – ಮಾದರಿ ನೀಲನಕಾಶೆ ಮತ್ತು ಪ್ರಶ್ನೆ ಪತ್ರಿಕೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ, ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 21 | 21 | 12 |
| 2 | ಗ್ರಹಿಕೆ | 36 | 36 | 21 |
| 3 | ಅಭಿವ್ಯಕ್ತಿ | 39 | 39 | 11 |
| 4 | ಪ್ರಶಂಸೆ | 04 | 04 | 01 |
| | **ಒಟ್ಟು** | **100** | **100** | **45** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ, ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ ಪ್ರಶ್ನೆಗಳು | 10 | 10 | 10 |
| 2 | ಕಿರು ಉತ್ತರ – 1 | 07 | 07 | 07 |
| 3 | ಕಿರು ಉತ್ತರ – 2 | 20 | 20 | 10 |
| 4 | ದೀರ್ಘ ಉತ್ತರ – 1 | 33 | 33 | 11 |
| 5 | ದೀರ್ಘ ಉತ್ತರ – 2 | 20 | 20 | 05 |
| 6 | ದೀರ್ಘ ಉತ್ತರ – 3 | 10 | 10 | 02 |
| | **ಒಟ್ಟು** | **100** | **100** | **45** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ, ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30 | 40 | 24 |
| 2 | ಸಾಧಾರಣ | 50 | 50 | 18 |
| 3 | ಕಠಿಣ | 20 | 10 | 03 |
| | **ಒಟ್ಟು** | **100** | **100** | **45** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ, ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 28 | 28 | 13 |
| 2 | **ಪದ್ಯ ಒಟ್ಟು** | 30 | 30 | 11 |
| 3 | **ಪಠ್ಯಪೋಷಕ ಅಧ್ಯಯನ** | 09 | 09 | 05 |
| 4 | **ಅಪಠಿತ ಗದ್ಯ** | 04 | 04 | 01 |
| 5 | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | 29 | 29 | 15 |
| | **ಸಮಗ್ರ ಒಟ್ಟು** | **100** | **100** | **45** |

**ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ, ಶೇಕಡವಾರು ಅಂಕ ಹಂಚಿಕೆ.**

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಯುದ್ಧ | 05 | 02 |
| 2 | ಶಬರಿ | 05 | 02 |
| 3 | ************************************************************ | *********** | ************ |
| 4 | ಭಾಗ್ಯಶಿಲ್ಪಿಗಳು | 05 | 02 |
| 5 | ಎದೆಗೆ ಬಿದ್ದ ಅಕ್ಷರ | 05 | 02 |
| 6 | ವ್ಯಾಘ್ರಗೀತೆ | 04 | 02 |
| 7 | ವೃಕ್ಷಸಾಕ್ಷಿ | 04 | 03 |
| 8 | ************************************************************ | *********** | ************ |
| | ಗದ್ಯ ಒಟ್ಟು | 28 | 13 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಸಂಕಲ್ಪಗೀತೆ | 05 | 02 |
| 2 | ಹಕ್ಕಿ ಹಾರುತಿದೆ ನೋಡಿದಿರಾ? | 05 | 01 |
| 3 | ಹಲಗಲಿಯ ಬೇಡರು | 04 | 02 |
| 4 | ಕೌರವೇಂದ್ರನ ಕೊಂದೆ ನೀನು | 04 | 02 |
| 5 | ಹಸುರು | 04 | 02 |
| 6 | ಛಲಮನೆ ಮೆರೆವೆಂ | 04 | 01 |
| 7 | ವೀರಲವ | 04 | 01 |
| 8 | ************************************************************ | *********** | ************ |
| | ಪದ್ಯ ಒಟ್ಟು | 30 | 11 |

## 3. ಪಠ್ಯ ಪೂರಕ ಅಧ್ಯಯನ

| ಕ್ರ.ಸಂ | ಪಠ್ಯಪೂರಕ ಅಧ್ಯಯನ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಸ್ವಾಮಿ ವಿವೇಕಾನಂದರ ಚಿಂತನೆಗಳು | 03 | 02 |
| 2 | ವಸಂತ ಮುಖ ತೋರಲಿಲ್ಲ | 02 | 01 |
| 3 | ಭಗತ್ ಸಿಂಗ್ | 02 | 01 |
| 4 | ******************** | **** | ***** |
| 5 | ಜನಪದ ಒಗಟುಗಳು | 02 | 01 |
| | ಪದ್ಯ ಒಟ್ಟು | 09 | 05 |

## 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಅಪಠಿತ ಗದ್ಯ | 04 | 01 |

## 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ವ್ಯಾಕರಣಾಂಶಗಳು | 10 | 10 |
| 2 | ಅಲಂಕಾರ | 03 | 01 |
| 3 | ಛಂದಸ್ಸು | 03 | 01 |
| 4 | ಗಾದೆ ವಿಸ್ತರಣೆ | 03 | 01 |
| 5 | ಪತ್ರಲೇಖನ | 05 | 01 |
| 6 | ಪ್ರಬಂಧ ಲೇಖನ | 05 | 01 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 29 | 15 |

ಸಿರಿ ಕನ್ನಡ ನುಡಿ ಬಳಗ, ಕರ್ನಾಟಕ ರಾಜ್ಯ

## ಹಂತ : 5(ಎ). ಎಸ್. ಎಸ್. ಎಲ್. ಸಿ. ಪೂರ್ವಸಿದ್ಧತಾ ಪರೀಕ್ಷೆ – ಪ್ರಥಮ ಭಾಷೆ ಕನ್ನಡ – ಮಾದರಿ ನೀಲನಕಾಶೆ

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ. ಉ. 2 | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಯುದ್ಧ | ** | ** | ** | ** | 1(2) | 1(3) | ** | ** | ** | ** | ** | ** | ** | ** | 1(2) | 1(3) | ** | ** | 05 | 02 |
| 2 | ಶಬರಿ | ** | 1(1) | ** | ** | ** | ** | ** | ** | ** | 1(4) | ** | ** | ** | 1(1) | ** | ** | 1(4) | ** | 05 | 02 |
| 3 | ******************** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| 4 | ಭಾಗ್ಯಶಿಲ್ಪಿಗಳು | ** | ** | ** | ** | 1(2) | ** | ** | ** | 1(3) | ** | ** | ** | ** | ** | 1(2) | 1(3) | ** | ** | 05 | 02 |
| 5 | ಎದೆಗೆ ಬಿದ್ದ ಅಕ್ಷರ | ** | ** | ** | ** | 1(2) | ** | ** | ** | 1(3) | ** | ** | ** | ** | ** | 1(2) | 1(3) | ** | ** | 05 | 02 |
| 6 | ವ್ಯಾಘ್ರಗೀತೆ | ** | 1(1) | ** | 1(1) | ** | ** | ** | ** | 1(3) | ** | ** | ** | ** | 1(1) | ** | 1(3) | ** | ** | 04 | 02 |
| 7 | ವೃಕ್ಷಸಾಕ್ಷಿ | ** | 1(1) | ** | ** | 1(2) | ** | ** | ** | ** | ** | ** | ** | ** | 2(1) | 1(2) | ** | ** | ** | 04 | 03 |
| 8 | ******************** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| | **ಗದ್ಯ ಒಟ್ಟು** | ** | **3(1)** | ** | **1(1)** | **4(2)** | **1(3)** | ** | ** | **3(3)** | **1(4)** | ** | ** | ** | **4(1)** | **4(2)** | **4(3)** | **1(4)** | ** | **28** | **13** |
| 1 | ಸಂಕಲ್ಪಗೀತೆ | ** | ** | ** | ** | 1(2) | ** | ** | ** | 1(3) | ** | ** | ** | ** | ** | 1(2) | 1(3) | ** | ** | 05 | 02 |
| 2 | ಹಕ್ಕಿ ಹಾರುತಿದೆ ನೋಡಿದಿರಾ | ** | ** | 1(4) | ** | ** | ** | ** | ** | ** | ** | ** | ** | ** | ** | ** | ** | 1(4) | ** | 04 | 01 |
| 3 | ಹಲಗಲಿಯ ಬೇಡರು | ** | ** | ** | 1(1) | ** | ** | ** | ** | 1(3) | ** | ** | ** | ** | 1(1) | ** | 1(3) | ** | ** | 04 | 02 |
| 4 | ಕೌರವೇಂದ್ರನ ಕೊಂದೆ ನೀನು | ** | ** | ** | ** | 1(2) | 1(3) | ** | ** | ** | ** | ** | ** | ** | ** | 1(2) | 1(3) | ** | ** | 05 | 02 |
| 5 | ಹಸುರು | ** | 1(1) | ** | ** | ** | ** | ** | ** | 1(3) | ** | ** | ** | ** | 1(1) | ** | 1(3) | ** | ** | 04 | 02 |
| 6 | ಛಲಮನೆ ಮೆರೆವೆಂ | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | 1(4) | ** | 04 | 01 |
| 7 | ವೀರಲವ | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| 8 | ******************** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| | **ಪದ್ಯ ಒಟ್ಟು** | ** | **1(1)** | **1(4)** | **1(1)** | **2(2)** | **1(3)** | ** | ** | **3(3)** | **1(4)** | ** | **1(4)** | ** | **2(1)** | **2(2)** | **4(3)** | **3(4)** | ** | **30** | **11** |
| 1 | ಸ್ವಾಮಿ ವಿವೇಕಾನಂದರ ಚಿಂತನೆಗಳು | ** | 1(1) | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 2 | ವಸಂತ ಮುಖ ತೋರಲಿಲ್ಲ | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 3 | ಭಗತ್ ಸಿಂಗ್ | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 4 | ******************** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| 5 | ಜನಪದ ಒಗಟುಗಳು | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | |
| | **ಪಠ್ಯಪೂರಕ ಅಧ್ಯಯನ ಒಟ್ಟು** | ** | **1(1)** | ** | ** | **4(2)** | ** | ** | *** | ** | ** | ** | ** | ** | **1(1)** | **4(2)** | ** | ** | ** | **09** | **05** |
| 1 | **ಅಪಠಿತ ಗದ್ಯ** | ** | ** | ** | ** | ** | ** | 1(4) | ** | ** | ** | ** | ** | ** | ** | ** | ** | **1(4)** | ** | **04** | **01** |

**********

## ವ್ಯಾಕರಣ, ಛಂದಸ್ಸು, ಅಲಂಕಾರ ಮತ್ತು ವಾಕ್ಯ ರಚನೆ

| | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| 1 | ಅಲಂಕಾರ | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | *** | ** | ** | 1(3) | ** | | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 6 | ವ್ಯಾಕಣಾಂಶಗಳು | 10(1)) | ** | ** | ** | ** | ** | ** | ** | ** | ** | ** | ** | 10(1) | ** | ** | ** | ** | ** | 10 | 10 |
| | **ಒಟ್ಟು** | **10(1)** | ** | ** | *** | ** | **2(3)** | ** | ** | **1(3)** | ** | **2(5)** | ** | **10(1)** | ** | ** | **3(3)** | ** | **2(5)** | **29** | **15** |
| | **ಸಮಗ್ರ ಒಟ್ಟು** | **10(1)** | **7(1)** | **1(4)** | *** | **10(2)** | **4(3)** | **1(4)** | *** | **7(3)** | **2(4)** | **2(5)** | **1(4)** | **10(1)** | **7(1)** | **10(2)** | **11(3)** | **5(4)** | **2(5)** | **100** | **45** |
| | | **18 – 21** | | | **15 – 36** | | | | **11 – 39** | | | | **01 – 04** | **45 – 100** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

ಸಿರಿ ಕನ್ನಡ ನುಡಿ ಬಳಗ, ಕರ್ನಾಟಕ ರಾಜ್ಯ

# ಎಸ್. ಎಸ್. ಎಲ್. ಸಿ. ಸಾರ್ವತ್ರಿಕ ಪರೀಕ್ಷೆ – 2021

# ಪ್ರಥಮ ಭಾಷೆ ಕನ್ನಡ

# ಮಾದರಿ ಪ್ರಶ್ನೆ ಪತ್ರಿಕೆ

**ಸಮಯ : 03–15 ಗಂಟೆಗಳು** **ಗರಿಷ್ಠ ಅಂಕಗಳು : 100**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 * 1 = 6**

1. ಇವುಗಳಲ್ಲಿ ಯಣ್ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ಮನ್ವಂತರ (ಬಿ) ರಾಜ್ಯಾಭಿಷೇಕ
   (ಸಿ) ಸೂರ್ಯೋದಯ (ಡಿ) ಸದ್ವಂಶ
2. 'ದಿನಪಸುತ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   (ಎ) ತತ್ಪುರುಷ (ಬಿ) ಕರ್ಮಧಾರಯ
   (ಸಿ) ಬಹುವ್ರೀಹಿ (ಡಿ) ದ್ವಂದ್ವ
3. ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳನ್ನು ಹೀಗೆನ್ನುವರು;
   (ಎ) ಸಾಮಾನ್ಯಾವ್ಯಯ (ಬಿ) ಕ್ರಿಯಾರ್ಥಕಾವ್ಯಯ
   (ಸಿ) ಅನುಕರಣಾವ್ಯಯ (ಡಿ) ಭಾವಸೂಚಕಾವ್ಯಯ
4. ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು; ಆದ್ದರಿಂದ ವೀರೇಶ್ವರ ಪಾಠಕ್ ಅವರು ಮಲೇರಿಯಾದಿಂದ ಬಳಲಬೇಕಾಯಿತು; ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು. – ವಾಕ್ಯವು
   (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
   (ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ
5. ಇವುಗಳಲ್ಲಿ ತದ್ಧಿತಾಂತ ಭಾವನಾಮಕ್ಕೆ ಉದಾಹರಣೆಯಾದ ಪದವಿದು;
   (ಎ) ಬಡವನಿಗಾಗಿ (ಬಿ) ಬಡತನ
   (ಸಿ) ಬಡವನಿಗೋಸ್ಕರ (ಡಿ) ಬಡವನಂತೆ
6. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಈ ಚಿಹ್ನೆಯನ್ನು ಬಳಸಬೇಕು;
   (ಎ) ಪೂರ್ಣವಿರಾಮ (ಬಿ) ಅರ್ಧವಿರಾಮ
   (ಸಿ) ಅಲ್ಪವಿರಾಮ (ಡಿ) ಆವರಣ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4 * 1 = 4**

7. ಬಂದೂಕು : ಉರ್ದು : : ಸಾಬೂನು : ____________________
8. ಇರುಳಿರುಳು : ದ್ವಿರುಕ್ತಿ : : ನಡೆನುಡಿ : ______________
9. ಮ್ಯಾಗ : ಮೇಲೆ : : ಸಕ್ಕಾರಿ : ____________
10. ಪುಸ್ತಕ : ಹೊತ್ತಗೆ : : ವ್ಯಾಪಾರಿ : _______________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 * 1 = 7**

11. ಶಬರಿಯು ಶ್ರೀರಾಮನಿಗೆ ಸಮರ್ಪಿಸಲು ಏನನ್ನು ಸಂಗ್ರಹಿಸಿದ್ದಳು?
12. ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು?
13. ಹುಲಿಗೆ ಪರಮಾನಂದವಾಗಲು ಕಾರಣವೇನು?

14. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
15. ಹಲಗಲಿಯ ಗುರುತು ಉಳಿಯದಂತಾದುದು, ಏಕೆ?
16. ಕವಿ ಕುವೆಂಪು ಅವರಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?
17. ವಿವೇಕಾನಂದ ಅವರನ್ನು 'ಮಾನವ ಮಿತ್ರ' ಎಂದು ಕರೆದವರು ಯಾರು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 * 2 = 20**

18. ಮುದುಕಿಯು ಸೈನಿಕರಿಂದ ರಾಹಿಲನನ್ನು ಹೇಗೆ ರಕ್ಷಿಸಿದಳು?
19. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನವನ್ನು ಹೇಗೆ ಮಾದರಿ ಸಂಸ್ಥಾನವನ್ನಾಗಿ ಮಾಡಿದರು?
20. ಮಂಚಮ್ಮ ದೇವಿ 'ಮನೆಮಂಚಮ್ಮ' ದೇವಿಯಾಗಿ ರೂಪುಗೊಂಡ ಬಗೆ ಹೇಗೆ? ತಿಳಿಸಿ.
21. ದುಷ್ಟಬುದ್ಧಿಯ ತಂದೆಯಾದ ಪ್ರೇಮಮತಿಯು ತನ್ನ ಮಗನಿಗೆ ಹೇಗೆ ಬುದ್ಧಿಮಾತುಗಳನ್ನು ಹೇಳಿದನು?
22. ಕವಿ ಜಿ. ಎಸ್. ಶಿವರುದ್ರಪ್ಪ ಅವರ ಪ್ರಕಾರ ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?
23. 'ಕೃಷ್ಣನು ಕೌರವೇಂದ್ರನನ್ನು ಕೊಂದನು' ಎಂದು ಹೇಳಲು ಕಾರಣವೇನು?
24. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು, ಏಕೆ?
25. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
26. ಭಗತ್‌ಸಿಂಗ್ ತನ್ನ ಸಹಚರರೊಂದಿಗೆ ಮರಣ ದಂಡನೆಗೆ ಈಡಾಗಲು ಕಾರಣವೇನು?
27. ಹೊಲದಲ್ಲಿ ಹುಟ್ಟಿದ ಉತ್ತರಾಣಿ ಗಿಡ ಹಾಗೂ ಗರಿಕೆಯು ಕೊಡುವ ತೊಂದರೆಯನ್ನು 'ಒಗಟುಗಳು' ಹೇಗೆ ವಿವರಿಸುತ್ತವೆ?

**V. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 * 3 = 6**

28. ಸಾರಾ ಅಬೂಬಕ್ಕರ್
29. ಕುಮಾರವ್ಯಾಸ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 * 3 = 3**

30. ಕರಿ ಕೇಸರಿಯಂ ಕೆಣಕಿದ
    ಪರಿಯಂ ಪರುಠವಿಸದಿರ್ ಮದಾಂಧತೆಯಿಂದಾ ॥

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1 * 3 = 3**

1. ಭೀಮದುರ್ಯೋಧನರು ಮದಗಜಗಳಂತೆ ಹೋರಾಡಿದರು.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 * 3 = 3**

1. ಹೆತ್ತ ತಾಯಿ, ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು

   ಅಥವಾ

   ಚಿಂತೆಯೇ ಮುಪ್ಪು; ಸಂತೋಷವೇ ಯೌವನ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 * 3 = 18**

33. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."
34. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು."
35. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು."
36. "ಪ್ರೀತಿಯ ಹಣತೆಯ ಹಚ್ಚೋಣ"
37. "ಜೀವ ಸತ್ತು ಹೋಗುವುದು ಗೊತ್ತ"
38. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್."

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 * 4 = 4**

39. ನೀಲಮೇಘ ಮಂಡಲ ________________

________________________________

________________________________

________________________________

ಹಕ್ಕಿ ಹಾರುತಿದೆ ನೋಡಿದಿರಾ?

ಅಥವಾ

ಯುಗಯುಗಗಳ ________________

________________________________

________________________________

________________________________

ಹಕ್ಕಿ ಹಾರುತಿದೆ ನೋಡಿದಿರಾ?

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1 * 4 = 4**

40. ನೆಲಕಿಜೆವೆನೆಂದು ಬಗೆದಿರೆ
ಚಲಕಿಜೆವೆಂ ಪಾಂಡುಸುತರೊಳೀನೆಲನಿದು ಪಾ ।
ಟ್ಟೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 * 4 = 8**

41. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ? ವಿವರಿಸಿ.

**ಅಥವಾ**

'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ? ವಿವರಿಸಿ.

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು? ವಿವರಿಸಿ.

**ಅಥವಾ**

ಲವನ ನಡೆವಳಿಕೆ ನಿಮಗೆ ಮೆಚ್ಚುಗೆಯಾಯಿತೇ? ಏಕೆ? ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01*04 =04 (2+2)**

**43**. ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದ್ದರು. "ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ; ಕರ್ನಾಟಕವನ್ನು ಬಿಟ್ಟು ಭಾರತವಿಲ್ಲ" ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ "ವಿದೇಶಿ ವಸ್ತುಗಳ ಬಹಿಷ್ಕಾರ; ಸ್ವದೇಶಿ ವಸ್ತುಗಳ ಪುರಸ್ಕಾರ" ಚಳವಳಿಯಲ್ಲಿ ಧುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಜನರನ್ನು ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ, ಮಾದರಿಯಾದರು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನೂ ಮರೆಸುತ್ತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ, ನಮ್ಮ ಸಂಸ್ಕೃತಿಗಳನ್ನು ಪೋಷಿಸುವ 'ರಾಷ್ಟ್ರೀಯ ಶಿಕ್ಷಣ ಚಳವಳಿ'ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು. ವೆಂಕಟರಾಯರು ಈ ಚಳವಳಿಯಲ್ಲಿಯೂ ಧುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

**ಪ್ರಶ್ನೆಗಳು :**

43. ಅ) ಆಲೂರು ವೆಂಕಟರಾಯರು ಸ್ವದೇಶಿ ಚಳವಳಿಯ ಮೂಲಕ ಹೇಗೆ ಮಾದರಿ ಎನಿಸಿದರು?

43. ಬ) ಆಲೂರು ವೆಂಕಟರಾಯರು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ, ಪತ್ರ ಬರೆಯಿರಿ. 1 * 5 = 5**

44. ನಿಮ್ಮನ್ನು ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ರಾಮಾಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಶಿವಸ್ವಾಮಿ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಗೆ ಕುಡಿಯುವ ಶುದ್ಧ ನೀರಿನ ವ್ಯವಸ್ಥೆಯನ್ನು ಮಾಡಿಕೊಡುವಂತೆ ಕೋರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕು ಸುತ್ತೂರಿನ ಜೆ. ಎಸ್. ಎಸ್. ವಸತಿ ಶಾಲೆಯ ವಿದ್ಯಾರ್ಥಿನಿ 'ನೀಲಾಂಬಿಕೆ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ವಿನಂತಿಸಿ, ಚಾಮರಾಜನಗರ ತಾಲೂಕು ಮತ್ತು ಜಿಲ್ಲೆಯ ಉಡೀಗಾಲ ಗ್ರಾಮದಲ್ಲಿ ವಾಸವಿರುವ 'ಕಲ್ಯಾಣಮ್ಮ' ಎಂಬ ಹೆಸರಿನ ತಾಯಿ ಅವರಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

**1 * 5 = 5**

44. ಮಹಾಮಾರಿ ಕೊರೊನಾ (ಕೋವಿಡ್ 19) ಹಾವಳಿ.

ಅಥವಾ

ಸಾಮಾಜಿಕ ಪಿಡುಗುಗಳು.

**– : * * * * * : –**

ಸಿರಿ ಕನ್ನಡ ನುಡಿ ಬಳಗ, ಕರ್ನಾಟಕ ರಾಜ್ಯ

# ಎಸ್. ಎಸ್. ಎಲ್. ಸಿ. ಸಾರ್ವತ್ರಿಕ ಪರೀಕ್ಷೆ – 2021

## ಪ್ರಥಮ ಭಾಷೆ ಕನ್ನಡ

## ಮೌಲ್ಯಾಂಶ / ಉತ್ತರ ಸೂಚಿ ಮತ್ತು ಅಂಕ ವಿತರಣೆ

**ಸಮಯ : 03–15 ಗಂಟೆಗಳು** **ಗರಿಷ್ಠ ಅಂಕಗಳು : 100**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 * 1 = 6**

1. ಇವುಗಳಲ್ಲಿ ಯಣ್ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ಮನ್ವಂತರ (ಬಿ) ರಾಜ್ಯಾಭಿಷೇಕ
   (ಸಿ) ಸೂರ್ಯೋದಯ (ಡಿ) ಸದ್ವಂಶ
   **ಉತ್ತರ : (ಎ) ಮನ್ವಂತರ**
2. 'ದಿನಪಸುತ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   (ಎ) ತತ್ಪುರುಷ (ಬಿ) ಕರ್ಮಧಾರಯ
   (ಸಿ) ಬಹುವ್ರೀಹಿ (ಡಿ) ದ್ವಂದ್ವ
   **ಉತ್ತರ : (ಸಿ) ಬಹುವ್ರೀಹಿ**
3. ಕ್ರಿಯಾಪದದ ಸ್ಥಾನದಲ್ಲಿದ್ದು, ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯವನ್ನು ಹೀಗೆನ್ನುವರು;
   (ಎ) ಸಾಮಾನ್ಯಾವ್ಯಯ (ಬಿ) ಕ್ರಿಯಾರ್ಥಕಾವ್ಯಯ
   (ಸಿ) ಅನುಕರಣಾವ್ಯಯ (ಡಿ) ಭಾವಸೂಚಕಾವ್ಯಯ
   **ಉತ್ತರ : (ಬಿ) ಕ್ರಿಯಾರ್ಥಕಾವ್ಯಯ**
4. ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು; ಆದ್ದರಿಂದ ವೀರೇಶ್ವರ ಪಾಠಕ್ ಅವರು ಮಲೇರಿಯಾದಿಂದ ಬಳಲಬೇಕಾಯಿತು; ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು. – ವಾಕ್ಯವು
   (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
   (ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ
   **ಉತ್ತರ : (ಬಿ) ಸಂಯೋಜಿತ ವಾಕ್ಯ**
5. ಇವುಗಳಲ್ಲಿ ತದ್ಧಿತಾಂತ ಭಾವನಾಮಕ್ಕೆ ಉದಾಹರಣೆಯಾದ ಪದವಿದು;
   (ಎ) ಬಡವನಿಗಾಗಿ (ಬಿ) ಬಡತನ
   (ಸಿ) ಬಡವನಿಗೋಸ್ಕರ (ಡಿ) ಬಡವನಂತೆ
   **ಉತ್ತರ : (ಬಿ) ಬಡತನ**
6. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಈ ಚಿಹ್ನೆಯನ್ನು ಬಳಸಬೇಕು;
   (ಎ) ಪೂರ್ಣವಿರಾಮ (ಬಿ) ಅರ್ಧವಿರಾಮ
   (ಸಿ) ಅಲ್ಪವಿರಾಮ (ಡಿ) ಆವರಣ
   **ಉತ್ತರ : (ಸಿ) ಅಲ್ಪವಿರಾಮ**

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4 * 1 = 4**

7. ಬಂದೂಕು : ಉರ್ದು : : ಸಾಬೂನು : **ಪೋರ್ಚುಗೀಸ್**
8. ಇರುಳಿರುಳು : ದ್ವಿರುಕ್ತಿ : : ನಡೆನುಡಿ : **ಜೋಡುನುಡಿ**
9. ಮ್ಯಾಗ : ಮೇಲೆ : : ಸಕ್ಕಾರಿ : **ಸಕ್ಕರೆ**
10. ಪುಸ್ತಕ : ಹೊತ್ತಗೆ : : ವ್ಯಾಪಾರಿ : **ಬೇಹಾರಿ**

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 * 1 = 7**

**11. ಶಬರಿಯು ಶ್ರೀರಾಮನಿಗೆ ಸಮರ್ಪಿಸಲು ಏನನ್ನು ಸಂಗ್ರಹಿಸಿದ್ದಳು?**

ಶಬರಿಯು ಶ್ರೀರಾಮನಿಗೆ ಸಮರ್ಪಿಸಲು **ಪರಿಮಳದ ಹೂವು, ಮಧುಪರ್ಕ ಮತ್ತು ರುಚಿಕರವಾದ ಹಣ್ಣುಹಂಪಲುಗಳನ್ನು** ಸಂಗ್ರಹಿಸಿದ್ದಳು.

**12. ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು?**

ಶಾನುಭೋಗರ ಬ್ರಹ್ಮಾಸ್ತ್ರ **ಖಿರ್ದಿ ಪುಸ್ತಕ.**

**13. ಹುಲಿಗೆ ಪರಮಾನಂದವಾಗಲು ಕಾರಣವೇನು?**

**ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ** ಹುಲಿಗೆ ಪರಮಾನಂದವಾಯಿತು.

**14. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?**

ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ **ಹೊನ್ನಿನ (ಚಿನ್ನದ ನಾಣ್ಯದ) ಕಳ್ಳತನದ** ಆರೋಪವನ್ನು ಹೊರಿಸಿದನು.

**15. ಹಲಗಲಿಯ ಗುರುತು ಉಳಿಯದಂತಾದುದು, ಏಕೆ?**

**ಹಲಗಲಿಯ ಮೇಲೆ ಬ್ರಿಟಿಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿ ಹಚ್ಚಿದ್ದರಿಂದ** ಹಲಗಲಿಯ ಗುರುತು ಉಳಿಯದಂತಾಯಿತು.

**16. ಕವಿ ಕುವೆಂಪು ಅವರಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?**

ಕವಿ ಕುವೆಂಪು ಅವರಿಗೆ ಹುಲ್ಲಿನ ಹಾಸು **ಮಕಮಲ್ಲಿನ ಹೊಸಪಚ್ಚೆಯ ಜಮಖಾನದಂತೆ** ಕಂಡಿದೆ.

**17. ವಿವೇಕಾನಂದ ಅವರನ್ನು 'ಮಾನವ ಮಿತ್ರ' ಎಂದು ಕರೆದವರು ಯಾರು?**

ವಿವೇಕಾನಂದ ಅವರನ್ನು 'ಮಾನವ ಮಿತ್ರ' ಎಂದು ಕರೆದವರು **ಕುವೆಂಪು.**

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 * 2 = 20**

**18. ಮುದುಕಿಯು ಸೈನಿಕರಿಂದ ರಾಹಿಲನನ್ನು ಹೇಗೆ ರಕ್ಷಿಸಿದ್ದಳು?**

"ಬಾಗಿಲು ತೆಗೆಯಿರಿ" ಎಂಬ ಗರ್ಜನೆಯ ಧ್ವನಿ ಕೇಳಿದ ಮುದುಕಿ ನಿಶ್ಶಬ್ದವಾಗಿ ರಾಹಿಲನನ್ನು ಸೊಸೆ ಮಲಗಿದ ಕೋಣೆಗೆ ಕಳುಹಿಸಿ, ಮಂಚದಡಿಯನ್ನು ತೋರಿಸಿದಳು. ಬಾಗಿಲು ತೆರೆದಾಗ ಒಳನುಗ್ಗಿದ ಸೈನಿಕರು "ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ" ಎಂದು ಹುಡುಕಲು ಮುಂದಾದಾಗ "ನನ್ನ ಮೊಮ್ಮಗುವಿನ ಹೆಣವಿದೆ, ಅದನ್ನೂ ನೋಡಿ, ಯಾರಿಗಾಗಿ, ಯಾತಕ್ಕಾಗಿ ಈ ಯುದ್ಧ? ಅದನ್ನಾದರೂ ಹೇಳಿರಿ. ಈ ಯುದ್ಧ ನನ್ನ ಮೊಮ್ಮಗುವನ್ನೂ ಉಳಿಸಲಿಲ್ಲ" ಎಂದು ನಿರ್ಜೀವವಾದ ಮಗುವಿನ ಬಳಿ ಕುಳಿತು, ಎದೆ ಬಡಿದುಕೊಂಡು ಅಳುತ್ತಾಳೆ. ಬಂದವರು ಮಗುವಿನ ಶವವನ್ನು ನೋಡಿದರು. ಕೋಣೆಯಿಂದ ಬರುತ್ತಿದ್ದ ಹಸಿನೆತ್ತರ ವಾಸನೆಗೆ ಮೂಗಿಗೆ ಬಡಿಯಿತು. ಬಂದ ಎಲ್ಲಾ ಸೈನಿಕರು ನಿಶ್ಶಬ್ದವಾಗಿ ಹಿಂದಿರುಗಿದರು. ಹೀಗೆ ಮುದುಕಿ ರಾಹಿಲನನ್ನು ಸೈನಿಕರಿಂದ ರಕ್ಷಿಸಿದಳು.

**19. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನವನ್ನು ಹೇಗೆ ಮಾದರಿ ಸಂಸ್ಥಾನವನ್ನಾಗಿ ಮಾಡಿದರು?**

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ, ಆಡಳಿತ ವಿಕೇಂದ್ರಿಕರಣಕ್ಕೆ ಅನುವು ಮಾಡಿಕೊಟ್ಟರು. ನಗರಪಾಲಿಕೆಗಳು ಮತ್ತು ಗ್ರಾಮ ಪಂಚಾಯಿತಿಗಳು ಸ್ವಂತಂತ್ರವಾಗಿ ಕಾರ್ಯನಿರ್ವಹಿಸಲು ಆರಂಭ ಮಾಡಿದರು. 1. ಗ್ರಾಮ ನೈರ್ಮಲೀಕರಣ, 2. ವೈದ್ಯಕೀಯ ಸಹಾಯ 3. ವಿದ್ಯಾ ಪ್ರಚಾರ 4. ನೀರಿನ ಸೌಕರ್ಯ 5. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳನ್ನು ಸ್ವಯಂ ಆಡಳಿತ ಕ್ಷೇತ್ರಗಳನ್ನಾಗಿ ಮಾಡಿದರು. ಹೀಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ಮಾಡಿದರು

**20. ಮಂಚಮ್ಮ ದೇವಿ ಮನೆಮಂಚಮ್ಮ ದೇವಿಯಾಗಿ ರೂಪುಗೊಂಡ ಬಗೆ ಹೇಗೆ? ತಿಳಿಸಿ.**

ಒಮ್ಮೆ ಗ್ರಾಮದ ಜನರೆಲ್ಲಾ ಸೇರಿ, ಮಂಚಮ್ಮ ದೇವಿಗೆ ಗುಡಿಯನ್ನು ಕಟ್ಟಲು ಪ್ರಾರಂಭಿಸುತ್ತಾರೆ. ಗುಡಿಯು ಚಾವಣಿಯ ಮಟ್ಟಕ್ಕೆ ಬಂದಾಗ ಒಬ್ಬನ ಮೈಮೇಲೆ ಮಂಚಮ್ಮ ದೇವಿ ಆವಾಹಿಸಿಕೊಂಡು ಬಂದು, ಜನರನ್ನು ಕುರಿತು "ಏನ್ರಯ್ಯಾ, ಏನು ಮಾಡ್ತಾ ಇದ್ದೀರಿ?" ಎಂದು ಪ್ರಶ್ನಿಸುತ್ತಾಳೆ. "ನಿನಗೆ ಗುಡಿ ಕಟ್ಟುತ್ತಿದ್ದೇವೆ" ಎಂದು ಜನರು ಉತ್ತರಿಸಿದಾಗ "ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಕಳಾ?" ಎಂದು ಮಂಚಮ್ಮ ದೇವಿ ಅಬ್ಬರಿಸುತ್ತಾಳೆ. ಆಗ ಅಲ್ಲಿದ್ದ ಒಬ್ಬ "ನನಗಿಲ್ಲ ತಾಯಿ" ಎನ್ನುತ್ತಾನೆ. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೂ ನನಗೂ ಮನೆ ಬೇಡ" ಎಂದು ಮಂಚಮ್ಮ ದೇವಿ ಹೇಳುತ್ತಾಳೆ. ಅಂದಿನಿಂದ ಮಂಚಮ್ಮ ದೇವಿ ಮನೆಮಂಚಮ್ಮ ದೇವಿಯಾಗಿ ರೂಪುಗೊಂಡು, ಇಂದಿಗೂ ಚಾವಣಿಯಿಲ್ಲದ ಗುಡಿಯಲ್ಲಿ ಪೂಜಿತಳಾಗುತ್ತಿದ್ದಾಳೆ.

**21. ದುಷ್ಟಬುದ್ಧಿಯ ತಂದೆಯಾದ ಪ್ರೇಮಮತಿಯು ತನ್ನ ಮಗನಿಗೆ ಹೇಗೆ ಬುದ್ಧಿಮಾತುಗಳನ್ನು ಹೇಳಿದನು?**

ದುಷ್ಟಬುದ್ಧಿಯ ತಂದೆಯಾದ ಪ್ರೇಮಮತಿಯು ತನ್ನ ಮಗನಿಗೆ "ಪರಧನ ಹರಣ ಮಾಡುವುದು, ವಿಶ್ವಾಸಘಾತಕವನ್ನು ಮಾಡುವುದು, ಸ್ವಾಮಿದ್ರೋಹ ಮಾಡುವುದು ಇವೆಲ್ಲವೂ ಮನುಷ್ಯನನ್ನು ಹಾಳು ಮಾಡುವುವು. ಇದೆಲ್ಲವನ್ನು ತಿಳಿದಿದ್ದರೂ ಸಹ ನೀನು ಬಂದು ನನ್ನನ್ನು ಸಾಕ್ಷಿಮಾಡಿ ಅಸತ್ಯವನ್ನು ನುಡಿಸಿ, ನನ್ನನ್ನು ನಾಶ ಮಾಡಲು ಬಗೆದಿರುವೆ. ನಿನ್ನ ಈ ಕೆಟ್ಟಕಾರ್ಯ ನಮ್ಮ ಕುಲವನೆಲ್ಲವನ್ನೂ ನಾಶ ಮಾಡುವ ಬಗೆಯಾಗಿದೆ" ಎಂದು ಹೇಳಿ ಬುದ್ಧಿಮಾತುಗಳನ್ನು ಹೇಳಿದನು.

**22. ಕವಿ ಜಿ. ಎಸ್. ಶಿವರುದ್ರಪ್ಪ ಅವರ ಪ್ರಕಾರ 'ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?**

ಕವಿ ಜಿ. ಎಸ್. ಶಿವರುದ್ರಪ್ಪ ಅವರ ಪ್ರಕಾರ "ಎಲ್ಲ ಮತಧರ್ಮಗಳು ದಾರಿ ತೋರಿಸುವ ದೀಪಗಳಾಗಿರುವುದರಿಂದ ಎಲ್ಲಾ ಮತಗಳನ್ನು ಪುರಸ್ಕರಿಸುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು. ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಕನಸನ್ನು ಬಿತ್ತುತ್ತ ಬದುಕು ನಡೆಸಬೇಕು.

23. **'ಕೃಷ್ಣನು ಕೌರವೇಂದ್ರನನ್ನು ಕೊಂದನು' ಎಂದು ಹೇಳಲು ಕಾರಣವೇನು?**

ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು, ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ" ಎಂದನು.

**24. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು, ಏಕೆ?**

ವಿವೇಕಾನಂದರ ಧಾರ್ಮಿಕ ಚಿಂತನೆಗಳನ್ನು ಅವಲೋಕಿಸಿದಾಗ ಅವರು ಸ್ಪಷ್ಟವಾಗಿ ಕೋಮುವಾದದ ವಿರೋಧಿಯಾಗಿದ್ದರೆಂದು ತಿಳಿದುಬರುತ್ತದೆ. ಕೋಮುವಾದವು ಏಕಧರ್ಮ ಮತ್ತು ಏಕಸಂಸ್ಕೃತಿಯೇ ಶ್ರೇಷ್ಠವೆಂದು ಅದೇ ಅಂತಿಮವೆಂದು ನಂಬುತ್ತ ನಂಬಿಸುತ್ತ, ಪರಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ. ಇಂತಹ ಪ್ರವೃತ್ತಿಗೆ ವಿವೇಕಾನಂದರು ಕಟ್ಟಾ ವಿರೋಧಿಯಾಗಿದ್ದರು.

**25. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

ಋತುಗಳ ರಾಜನಾದ ವಸಂತನ ಆಗಮನದ ಸಮಯದಲ್ಲಿ ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು ಹಸುರಾದ ಎಲೆಗಳು ಮತ್ತು ಹಣ್ಣುಗಳಿಂದ ಮೈದುಂಬಿ ನಿಂತಿವೆ. ಆಕಾಶದಲ್ಲಿ ಹಕ್ಕಿಗಳು ರೆಕ್ಕೆಗಳನ್ನು ಬಿಚ್ಚಿ ಹಾರುತ್ತಿವೆ. ಮಾವಿನ ಚಿಗುರನ್ನು ತಿಂದು ಕೋಗಿಲೆಗಳು ಮನದುಂಬಿ ಹಾಡುತ್ತಿವೆ. ಕಡಲುಕ್ಕಿ ಹರಿಯುತ್ತಿದೆ. ಭೂಮಿಯು ವಸಂತನ ಆಗಮನದ ಸಂತಸದಲ್ಲಿ ಮುಳುಗಿ ಸಂಭ್ರಮಿಸುತ್ತಿದೆ. ಮಲ್ಲಿಗೆಯ ಹೂವುಗಳು ಅರಳಿ ಮುಗುಳುನಗೆ ಬೀರುತ್ತಿವೆ. ಮನೆಯ ಮುಂದಿನ ಹೊಳೆಯುವ ರಂಗೋಲಿಯಲ್ಲಿ ಬಾಲರವಿಯು ಥಳಥಳಿಸುತ್ತಿದ್ದಾನೆ. ಹೀಗೆ 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ.

**26. ಭಗತ್‌ಸಿಂಗ್ ತನ್ನ ಸಹಚರರೊಂದಿಗೆ ಮರಣ ದಂಡನೆಗೆ ಈಡಾಗಲು ಕಾರಣವೇನು?**

ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್ ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ತನ್ನ ಸಹಚರರಾದ ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತರೊಂದಿಗೆ ಮರಣ ದಂಡನೆಗೆ ಈಡಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾದನು.

**27. ಹೊಲದಲ್ಲಿ ಹುಟ್ಟಿದ ಉತ್ತರಾಣಿ ಗಿಡ ಹಾಗೂ ಗರಿಕೆಯು ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ?**

ಹೊಲದಲ್ಲಿ ಹುಟ್ಟಿದ ಉತ್ತರಾಣಿ ಕಡ್ಡಿಯು ದಾರಿಯ ಬದಿಯಲ್ಲಿ ಹುಟ್ಟಿ, ದಾರಿಯ ಬದಿಯಲ್ಲಿ ಬೆಳೆದು, ದಾರಿಯಲ್ಲಿ ಓಡಾಡುವವರ ಮುಂಜೆರಗನ್ನು ಹಿಡಿದು ಎಳೆದು ತೊಂದರೆಯನ್ನು ಕೊಡುತ್ತದೆ. ಗರಿಕೆಯ ಹುಲ್ಲು ಹೊಲದಲ್ಲಿ ಹುಟ್ಟಿ, ಹೊಲದಲ್ಲಿ ಬೆಳೆದು, ಬೆಳೆಯ ಬೆಳವಣಿಗೆಗೆ ಅಡ್ಡಿಯಾಗಿ ರೈತನಿಗೆ ತೊಂದರೆ ಕೊಡುತ್ತದೆ.

## V. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 * 3 = 6

**28. ಸಾರಾ ಅಬೂಬಕ್ಕರ್**

**ಶ್ರೀಮತಿ ಸಾರಾ ಅಬೂಬಕ್ಕರ್** ಅವರು ಕ್ರಿ. ಶ. **1936** ರಲ್ಲಿ **ಕಾಸರಗೋಡಿ**ನಲ್ಲಿ ಜನಿಸಿದರು. ನಾಡಿನ ಖ್ಯಾತ ಕತೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯತೆ ಗಳಿಸಿರುವ ಇವರು **ಚಪ್ಪಲಿಗಳು,** ಖೆಡ್ಡಾ, ಪಯಣ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು ಕಥಾ ಸಂಕಲನಗಳನ್ನು ಹಾಗೂ ಚಂದ್ರಗಿರಿಯ ತೀರದಲ್ಲಿ, ಕದನವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ ಮೊದಲಾದ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಕೃಷಿಗಾಗಿ ಅನೇಕ ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ನೃಪತುಂಗ ಪ್ರಶಸ್ತಿಯೂ ಸಹ ಇವರಿಗೆ ಲಭಿಸಿದೆ.

29. ಕುಮಾರವ್ಯಾಸ

**ಕುಮಾರವ್ಯಾಸ** ಎಂದು ಪ್ರಸಿದ್ಧನಾಗಿರುವ **ಗದುಗಿನ ನಾರಣಪ್ಪ** ಅವರು **ಕ್ರಿ. ಶ. ಸುಮಾರು 1430** ರಲ್ಲಿ ಗದಗ ಪ್ರಾಂತ್ಯದ **ಕೋಳಿವಾಡ**ದಲ್ಲಿ ಜನಿಸಿದರು. ಇವರು ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ರಚಿಸಿ ಕುಮಾರವ್ಯಾಸ ಎಂಬ ಅಭಿದಾನಕ್ಕೆ ಪಾತ್ರರಾದರು. ಇವರು **'ಕರ್ನಾಟ ಭಾರತ ಕಥಾ ಮಂಜರಿ'** ಮತ್ತು **'ಐರಾವತ'** ಎಂಬ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ **'ರೂಪಕ ಸಾಮ್ರಾಜ್ಯ ಚಕ್ರವರ್ತಿ'** ಎಂಬ ಬಿರುದನ್ನು ನೀಡಿ ಗೌರವಿಸಲಾಗಿದೆ. ನಡುಗನ್ನಡ ಕಾವ್ಯ ಪರಂಪರೆಯಲ್ಲಿ ಗದುಗಿನ ಭಾರತ ಅತ್ಯಂತ ಜನಪ್ರಿಯವಾದ ಮಹಾಕಾವ್ಯವಾಗಿದೆ.

## VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 * 3 = 3

**30. ಕರಿ ಕೇಸರಿಯಂ ಕೆಣಕಿದ**

**ಪರಿಯಂ ಪರುಠವಿಸದಿರ್ ಮದಾಂಧತೆಯಿಂದಾ ॥**

| | | | | |
|---|---|---|---|---|
| 4 | 4 | 4 | | |
| ∪ ∪ — | ∪ ∪ — | ∪∪∪∪ | | |
| ಕರಿ ಕೇ | ಸರಿಯಂ | ಕೆಣಕಿದ | | |
| 4 | 4 | 4 | 4 | 4 |
| ∪ ∪ — | ∪∪∪∪ | ∪ — ∪ | — ∪∪ | — — |
| ಪರಿಯಂ | ಪರುಠವಿ | ಸದಿರ್ ಮ | ದಾಂಧತೆ | ಯಿಂದಾ |

**ಈ ಮೇಲಿನ ಪದ್ಯವು ಮಾತ್ರಾಗಣದ ಕಂದಪದ್ಯದಲ್ಲಿ ರಚಿತವಾಗಿದೆ.**

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1 * 3 = 3**

**31. ಭೀಮದುರ್ಯೋಧನರು ಮದಗಜಗಳಂತೆ ಹೋರಾಡಿದರು.**

| | | |
|---|---|---|
| **ಅಲಂಕಾರ** | :– | ಉಪಮಾಲಂಕಾರ |
| ಲಕ್ಷಣ | :– | ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'. |
| **ಉಪಮೇಯ** | :– | ಭೀಮ ದುರ್ಯೋಧನರು |
| **ಉಪಮಾನ** | :– | ಮದಗಜಗಳು |
| **ಉಪಮಾ ವಾಚಕ** | :– | ಅಂತೆ |
| **ಸಮಾನ ಧರ್ಮ** | :– | ಹೋರಾಡುವುದು |
| **ಸಮನ್ವಯ** | :– | ಇಲ್ಲಿ ಉಪಮೇಯವಾದ ಭೀಮದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದುದರಿಂದ ಈ ವಾಕ್ಯವು ಉಪಮಾಲಂಕಾರಕ್ಕೆ ಉದಾಹರಣೆಯಾಗಿದೆ. |

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 * 3 = 3**

**32. ಹೆತ್ತ ತಾಯಿ, ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎನ್ನುವ ಮಾತು ಗಾದೆಯ ಮಹತ್ತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ.
ಪ್ರಸ್ತುತ ಗಾದೆ 'ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು' ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ. ತಾಯಿ ನಮ್ಮನ್ನು ಒಂಬತ್ತು ತಿಂಗಳು ತನ್ನ ಗರ್ಭದಲ್ಲಿಟ್ಟುಕೊಂಡು ಪೋಷಿಸಿದರೆ, ಹೊತ್ತನಾಡು ನಮ್ಮನ್ನು ಜೀವನಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. ಹೆತ್ತತಾಯಿಯ ಮಡಿಲಿನಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಬೇರೊಂದಿಲ್ಲ. ಅದೇ ರೀತಿ ಜನ್ಮಭೂಮಿಯ ಸಂಬಂಧವು ಸಹ ಬಿಡಿಸಲಾಗದಂತಹುದು. ನಮ್ಮ ನಾಡಿನಲ್ಲಿ ನಮಗೆ ದೊರೆಯುವ ಆನಂದ ಮತ್ತೆ ಎಲ್ಲೂ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಾದುದು. ರಾಮಾಯಣ ಮಹಾಕಾವ್ಯದಲ್ಲಿ ಶ್ರೀರಾಮನು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

**ಅಥವಾ**

**ಚಿಂತೆಯೇ ಮುಪ್ಪು; ಸಂತೋಷವೇ ಯೌವನ.**

ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎನ್ನುವ ಮಾತು ಗಾದೆಯ ಮಹತ್ತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ.
ಪ್ರಸ್ತುತ ಗಾದೆ 'ಚಿಂತೆಯೇ ಮುಪ್ಪು; ಸಂತೋಷವೇ ಯೌವನ' ಎಂಬುದು ಕನ್ನಡದ ಪ್ರಸಿದ್ಧ ಗಾದೆಗಳಲ್ಲಿ ಒಂದಾಗಿದೆ. ಚಿತೆಗೂ ಚಿಂತೆಗೂ ನಡುವೆ ಬಿಂದು ಮಾತ್ರ ವ್ಯತ್ಯಾಸ. ಚಿತೆ ಸತ್ತವರನ್ನು ಸುಟ್ಟರೆ ಚಿಂತೆ ಬದುಕಿರುವವರನ್ನು ಸದಾ ಸುಡುತ್ತಿರುತ್ತದೆ. ಚಿಂತೆಯಿಂದ ಸಂತೋಷ ಮಾಯವಾಗಿ, ಮಾನಸಿಕ ನೆಮ್ಮದಿ ಹಾಳಾಗಿ, ದೇಹ ಕುಗ್ಗಿ ಹೋಗಿ ಬಹು ಬೇಗ ಮುಪ್ಪು ಆವರಿಸುತ್ತದೆ. ಸಂತೋಷದ ಸ್ಥಿತಿಯು ನಮ್ಮನ್ನು ಮಾತ್ರವಲ್ಲದೆ ಇಡೀ ಪರಿಸರವನ್ನೇ ಸಂತೋಷದಾಯಕವನ್ನಾಗಿ ಮಾಡುತ್ತದೆ. ಸಂತೋಷದಿಂದ ದೇಹ, ಮನಸ್ಸುಗಳು ಹಗುರವಾಗಿ ಉತ್ಸಾಹವುಂಟಾಗುತ್ತದೆ. ಸಂತೋಷದಿಂದ ದೇಹದ ಆರೋಗ್ಯ ಹೆಚ್ಚಿ ಸದಾ ಯೌವನ ತುಂಬಿ ತುಳುಕುತ್ತದೆ. ಆದ್ದರಿಂದ ಸದಾ ಚಿಂತೆಯನ್ನು ಮಾಡುತ್ತ ನಿರುತ್ಸಾಹದಿಂದ ಮುದುಕರಂತೆ ಬಾಳುವುದರ ಬದಲು ಸದಾ ಸಂತೋಷದಿಂದ ಇದ್ದು ಉತ್ಸಾಹದಿಂದ ಯುವಕರಂತೆ ಬಾಳಬೇಕು ಎಂಬುದನ್ನು ಈ ಗಾದೆ ತಿಳಿಸುತ್ತದೆ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 * 3 = 18**

**33. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."**

**ಆಯ್ಕೆ :** ಈ ವಾಕ್ಯವನ್ನು 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದ ಭಾಗವಾಗಿರುವ **ಶ್ರೀ ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಪಂಡಿತ್ ಜವಾಹರಲಾಲ್ ನೆಹರು ಅವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿ, ಪ್ರಧಾನ ಭಾಷಣ ಮಾಡಿದ ಸಂದರ್ಭದಲ್ಲಿ ಈ ವಿಶ್ವೇಶ್ವರಯ್ಯ ಅವರನ್ನು ಕುರಿತು ಈ ಮಾತುಗಳನ್ನು ಹೇಳುತ್ತಾರೆ.

**ಸ್ವಾರಸ್ಯ :** 'ವಿಶ್ವೇಶ್ವರಯ್ಯ ಅವರು 'ಮಾತಿಗಿಂತ ಕೃತಿ ಲೇಸು' ಎಂದು ತಿಳಿದು ಕಾರ್ಯಪ್ರವೃತ್ತರಾಗಿ, ಎಲ್ಲರಿಗೂ ಆದರ್ಶಪ್ರಾಯರಾಗಿದ್ದರು' ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**34. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು."**

**ಆಯ್ಕೆ :** ಈ ವಾಕ್ಯವನ್ನು **ಶ್ರೀ ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ಲೇಖಕರಾದ ದೇವನೂರು ಮಹಾದೇವ ಅವರು "ವಚನಕಾರರು ತಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡು ಇರಲಿಲ್ಲ; ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಆದ ಇಷ್ಟದೈವ ಇತ್ತು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ : "ವಚನಕಾರರಿಗೆ ಅವರವರ** ಪ್ರಜ್ಞೆಯೇ ದೇವರು; ಆದ್ದರಿಂದ ಅವರು ನುಡಿದಂತೆ ನಡೆಯಬೇಕಾಯಿತು ಏಕೆಂದರೆ ತಮ್ಮ ಪ್ರಜ್ಞೆಯ ಮುಂದೆ ಸುಳ್ಳು ಹೇಳಲು ಆಗುವುದಿಲ್ಲ; ಅದು ಕಷ್ಟವಾಗುತ್ತದೆ" ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯವಾಗಿ ಹೇಳಿದ್ದಾರೆ.

**35. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು."**

**ಆಯ್ಕೆ :** ಈ ವಾಕ್ಯವನ್ನು **ಶ್ರೀ ಎ. ಎನ್. ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಳ್ಳಲು, ಶಾನುಭೋಗರು ಖಿರ್ದಿ ಪುಸ್ತಕವನ್ನು ಹುಲಿಯ ಮುಖದ ಮೇಲೆ ಎಸೆದು, ಮರದ ಕಡೆಗೆ ಓಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** 'ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಬಹು ಸ್ವಾರಸ್ಯಪೂರ್ಣವಾಗಿದೆ.

**36. "ಪ್ರೀತಿಯ ಹಣತೆಯ ಹಚ್ಚೋಣ"**

**ಆಯ್ಕೆ :** ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :** ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ದೃಢಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** "ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು" ಎಂದು ಕವಿಗಳು **ಸ್ವಾರಸ್ಯಪೂರ್ಣವಾಗಿ** ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**37. "ಜೀವ ಸತ್ತು ಹೋಗುವುದು ಗೊತ್ತ"**

**ಆಯ್ಕೆ :** ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :** ಬ್ರಿಟಿಷರು ಆಜ್ಞೆಯನ್ನು ಹೊರಡಿಸಿ, ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ, ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ಹಲಗಲಿಯ ಬೇಡರು "ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು" ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**38. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್."**

**ಆಯ್ಕೆ :–** ಈ ವಾಕ್ಯವನ್ನು **'ಕುವೆಂಪು'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು ರಚಿಸಿರುವ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆಯ್ದ **'ಹಸುರು'** ಎಂಬ ಕವನದಿಂದ ಆರಿಸಲಾಗಿದೆ.

**ಸಂದರ್ಭ :–** ಕುವೆಂಪು ಅವರು ಕುಪ್ಪಳ್ಳಿಯ ಕವಿಶೈಲದಲ್ಲಿ ಆಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು, ಆನಂದದಿಂದ ಸವಿದ ಪ್ರಕೃತಿಯ ಹಚ್ಚಹಸುರಿನ ಸೌಂದರ್ಯದ ವರ್ಣನೆಯನ್ನು ಮಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** "ಆಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನಲ್ಲಿ ಅತ್ತ ನೋಡಿದರು ಹಸುರು, ಇತ್ತ ನೋಡಿದರೂ ಹಸುರು, ಎತ್ತ ನೋಡಿದರೂ ಹಸುರು, ಎಲ್ಲೆಲ್ಲೂ ಹಸುರಿನ ಸಾಗರ ಕಂಡಂತಾಗುತ್ತದೆ. ಇದರಿಂದ ಕವಿಯ ಆತ್ಮ, ಒಡಲು, ನೆತ್ತರು ಹಸುರುಗಟ್ಟಿ ಶಾಂತತೆಯಿಂದ ಕೂಡಿ, ಆನಂದಾನುಭೂತಿಯನ್ನು ಅನುಭವಿಸುತ್ತಿದೆ" ಎಂಬುದನ್ನು ಈ ನುಡಿ ಬಹುಸ್ವಾರಸ್ಯ ಪೂರ್ಣವಾಗಿ ಅಭಿವ್ಯಕ್ತಪಡಿಸುತ್ತದೆ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 * 4 = 4**

39. ನೀಲಮೇಘ ಮಂಡಲ – ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೂ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗ–ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.**
**1 * 4 = 4**

**40. ನೆಲಕಿಱಿವೆನೆಂದು ಬಗೆದಿರೆ**
**ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ ।**
**ೞ್ಕೆನೆಲನೆನಗೆ ದಿನಪಸುತನಂ**
**ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವೆನೇ ॥**

ಈ ಚರಣವನ್ನು ಮಹಾಕವಿ **ರನ್ನನು** ರಚಿಸಿರುವ **'ಸಾಹಸಭೀಮ ವಿಜಯಂ'** ಕೃತಿಯಿಂದ ಆಯ್ದ **'ಛಲಮನೆ ಮೆಱೆವೆಂ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ದುರ್ಯೋಧನನು ಛಲದಂಕಮಲ್ಲ ಎಂದು ಪ್ರಖ್ಯಾತನಾದವನು. ಭೀಷ್ಮನು 'ಸಂಧಿಗೆ ಒಪ್ಪಿಕೋ' ಎಂದರೆ ಅದಕ್ಕೆ ಒಪ್ಪದೆ ದುರ್ಯೋಧನನು ಮುಗುಳುನಗೆ ನಕ್ಕು ಹೇಳುವ ಈ ಮಾತುಗಳು ವೀರೋಚಿತವಾಗಿವೆ.

ಇಲ್ಲಿ ದುರ್ಯೋಧನನ ಛಲವಂತಿಕೆ, ವೀರತನ ಹಾಗೂ ಮಿತ್ರಪ್ರೇಮ ಮೊದಲಾದ ಮೌಲ್ಯಯುತ ಅಂಶಗಳು ಬಹುಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿವೆ.

ದುರ್ಯೋಧನನು ಭೀಷ್ಮರನ್ನು ಕುರಿತು "ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ತಿಳಿದಿರುವಿರೇ; ಚಲಕ್ಕಾಗಿ ಯುದ್ಧ ಮಾಡುವೆನು. ನನ್ನ ಪಾಲಿಗೆ ಇದು ಪಾಳುಭೂಮಿ. ಮಿತ್ರನಾದ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ಹೊಸಬಾಳು ಬಾಳುವೆನೇ?" ಎಂದು ಹೇಳಿದನು. ವೀರನಾದವನಿಗೆ ಸಾಮ್ರಾಜ್ಯದ ಮೋಹಕ್ಕಿಂತ ಛಲವೇ ಮುಖ್ಯ ಎಂಬ ಮೌಲ್ಯಯುತ ಸಂದೇಶವು ಇಲ್ಲಿ ಅಭಿವ್ಯಕ್ತಗೊಂಡಿದೆ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 * 4 = 8**

**41. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ? ವಿವರಿಸಿ.**

ರಾಮನು ಬಂದು ತನ್ನ ಆಶ್ರಮದಲ್ಲಿ ನಿಂತಿರುವುದನ್ನು ನೋಡಿ ಶಬರಿ ಆಶ್ಚರ್ಯಪಟ್ಟಳು. ರಾಮನ ಹತ್ತಿರ ಬಂದು ಅವನನ್ನು ಮುಟ್ಟಿ, ಪಾದಕ್ಕೆ ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಂಡು ಕಣ್ಣೀರು ಸುರಿಸಿದಳು. ಗದ್ಗದ ಸ್ವರದಿಂದ 'ಬನ್ನಿರಿ' ಎಂದು ಆಹ್ವಾನಿಸಿದಳು. 'ಸಿದ್ಧತೆಯೇ ಇಲ್ಲವಲ್ಲ !' ಎಂದು ಹಂಬಲಿಸಿದಳು. ಮನಸ್ಸಿನ ಬಯಕೆಯಂತೆ ಬಗೆಬಗೆಯ ಕಂಪು ಇರುವ ವನಮಾಲೆಯನ್ನು ರಾಮನ ಕೊರಳಿಗೆ ಇಟ್ಟು ಹಿಗ್ಗಿದಳು. ಜಗತ್ತಿನಲ್ಲಿ ಇಂತಹ ರುಚಿಕರವಾದ ಹಣ್ಣೇ ಇಲ್ಲವೆಂದು ಹೇಳುತ್ತ, ನಿಮಗಾಗಿ ತಂದಿದ್ದೇನೆಂದು ತಿಳಿಸಿ ರಾಮನ ಕೈಗೆ ಇತ್ತಳು. ಶಬರಿಯ ಸೇವೆಯಿಂದ ರಾಮನು ಸುಪ್ರಸನ್ನನಾದನು. ರಾಮಲಕ್ಷ್ಮಣರು ಧನ್ಯತಾಭಾವದಿಂದ ಮಂದಹಾಸ ಬೀರಿದರು. ಹೀಗೆ ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ.

**ಅಥವಾ**

**'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ? ವಿವರಿಸಿ.**

ಶಬರಿ ಮತಂಗ ಋಷಿಯ ಆಶ್ರಮದಲ್ಲಿ ಇರುತ್ತಾಳೆ. ಸಿದ್ಧರಾದ ಮತಂಗ ಋಷಿಗಳು ಶಬರಿಯ ಮನದಾಸೆಯನ್ನು ತಿಳಿದವರಾಗಿದ್ದು, "ರಾಮಲಕ್ಷ್ಮಣರು ಆಶ್ರಮಕ್ಕೆ ಬಂದೇ ಬರುತ್ತಾರೆ. ನಿನ್ನಿಷ್ಟಾರ್ಥ ನೆರವೇರುತ್ತದೆ" ಎಂದಿದ್ದರು. ಅವರ ಮಾತಿನಂತೆ ರಾಮಲಕ್ಷ್ಮಣರು ಶಬರಿಯ ಆಶ್ರಮಕ್ಕೆ ಭೇಟಿ ನೀಡುತ್ತಾರೆ. ಶಬರಿಯು ರಾಮನ ದರ್ಶನದಿಂದ ಪುಳಕಿತಳಾಗುತ್ತಾಳೆ. ಕಣ್ತುಂಬ ರಾಮನ ದರ್ಶನ ಮಾಡಿ, ಮುಟ್ಟಿ, ನಮಸ್ಕರಿಸಿ, ಸಂಭ್ರಮಿಸುತ್ತಾಳೆ. ಪರಿಮಳದ ವನಮಾಲೆಯನ್ನು ರಾಮನ ಕೊರಳಿಗೆ ಹಾಕಿ, ರುಚಿಕರ ಹಣ್ಣುಗಳನ್ನು ನೀಡಿ ಉಪಚರಿಸುತ್ತಾಳೆ. ಧನ್ಯಳಾದೆನೆಂದು ಸಂತಸ ವ್ಯಕ್ತಪಡಿಸುತ್ತಾಳೆ. ಹಲವಾರು ವರ್ಷಗಳಿಂದ ರಾಮನ ದರ್ಶನಕ್ಕಾಗಿ ಕಾದು, ಮುನಿಗಳ ಮಾತನ್ನು ನಂಬಿ, ರಾಮನು ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಯಿತು. ಶಬರಿಯ ಮನದಾಸೆ ಈಡೇರಿತು. ಹಾಗಾಗಿ 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು.

42. **ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು? ವಿವರಿಸಿ.**

ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು. ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು. ಆಗ ಇದನ್ನು ಕಂಡ ಲವನು "ಇದು ಯಾವ ಕಡೆಯ ಕುದುರೆಯು, ಹೊಕ್ಕು, ಹೂತೋಟವನ್ನು ನುಗ್ಗುನುರಿಯಾಗುವಂತೆ ತುಳಿದುದು." ಎಂದು ಕುದುರೆಯ ಕಡೆಗೆ ನಡೆದು ಬಂದು ನೋಡಿದನು. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು ಇದು ಅವನ ಯಜ್ಞ ಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ" ಎಂದು ಬರೆಯಲಾಗಿತ್ತು. ಇದನ್ನು ಓದಿದ ಲವನು ಕೋಪಗೊಂಡು "ಅಹಂಕಾರವನ್ನು ಬಿಡಿಸದಿದ್ದರೆ ತನ್ನ ತಾಯಿಯನ್ನು ಎಲ್ಲ ಜನರೂ ಬಂಜೆ

ಎನ್ನದಿರುವರೇ, ತನಗೆ ಇರುವ ತೋಳುಗಳು ಇವು ಏತಕೆ?" ಎಂದು ಪ್ರತಿಜ್ಞೆಯನ್ನು ಕೈಗೊಂಡು, ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಕಟ್ಟಿಹಾಕಿದನು.

**ಅಥವಾ**

**ಲವನ ನಡೆವಳಿಕೆ ಮೆಚ್ಚುಗೆಯಾಯಿತೇ? ಏಕೆ? ವಿವರಿಸಿ.**

ಲವನು ಬಾಲಕನಾಗಿದ್ದರೂ ಸ್ವಾಭಿಮಾನಿ. ಅವನ ಮಾತುಗಳು ವೀರೋಚಿತ. ಆತನ ಮಾತೃಪ್ರೇಮ ಅನನ್ಯ. ವಾಲ್ಮೀಕಿ ಮಹರ್ಷಿಗಳು ಆಶ್ರಮದಿಂದ ಹೊರಗೆ ಹೋಗುವಾಗ ಲವನಿಗೆ ಆಶ್ರಮದ ಜವಾಬ್ದಾರಿಯನ್ನು ವಹಿಸಿರುತ್ತಾರೆ. ಇಂತಹ ಸಮಯದಲ್ಲಿ ರಾಮನ ಯಜ್ಞಾಶ್ವವು ಆಶ್ರಮವನ್ನು ಪ್ರವೇಶಿಸಿ ಹೂದೋಟವನ್ನು ಹಾಳುಮಾಡುತ್ತದೆ. ಇದನ್ನು ಕಂಡು ಲವನು ಕುದುರೆಯ ಬಳಿಬಂದು, ಕುದುರೆಯ ನೆತ್ತಿಯ ಮೇಲೆ ಮೆರೆಯುತ್ತಿದ್ದ ಪಟ್ಟದ ಲಿಖಿತವನ್ನು ಓದಿ, ರಾಮನೊಬ್ಬನೇ ಜಗತ್ತಿಗೆ ವೀರನೆಂಬ ವಾಕ್ಯವನ್ನು ಕಂಡು ಕೆರಳಿ, ಇವನ ಗರ್ವವನ್ನು ಬಿಡಿಸುತ್ತೇನೆ, ಇಲ್ಲದಿದ್ದಲ್ಲಿ ನನ್ನ ತಾಯಿಯನ್ನು ಎಲ್ಲರೂ ಹೇಡಿಯನ್ನು ಹೆತ್ತವಳೆಂದು ದೂರಿಬಿಡುತ್ತಾರೆ ಎಂದು ಚಿಂತಿಸಿ, ತನ್ನ ತೋಳ್ಬಲವನ್ನು ತೋರಿಸಿಬಿಡುತ್ತೇನೆ ಎಂದು ಕುದುರೆಯನ್ನು ಕಟ್ಟಿ ಹಾಕುತ್ತಾನೆ. ಋಷಿ ಮುನಿಗಳ ಮಕ್ಕಳು ಹೆದರಿಕೆಯಿಂದ ಬೇಡವೆಂದಾಗ, "ಬ್ರಾಹ್ಮಣರ ಮಕ್ಕಳು ಯುದ್ಧಕ್ಕೆ ಹೆದರಿದರೆ; ಜಾನಕಿಯ ಸುತನು ಹೆದರುವನೇ?" ಎಂದು ವೀರನಂತೆ ಬಿಲ್ಲಿನ ಹೆದೆಯೆರಿಸಿ ಠೇಂಕಾರವನ್ನು ಮಾಡಿ ನಿಂತನು. ಇಂತಹ ವೀರ ಬಾಲಕನ ಶೌರ್ಯ, ತಾಯಿಯ ಮೇಲಿನ ಮಮತೆ, ದುರಹಂಕಾರವನ್ನು ಮೆಟ್ಟುವ ಸಾಹಸ ಎಂತಹವರಿಗೂ ಮೆಚ್ಚುಗೆಯಾಗುತ್ತದೆ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01*04 =04 (2+2)**

**43**. ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದ್ದರು. "ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ; ಕರ್ನಾಟಕವನ್ನು ಬಿಟ್ಟು ಭಾರತವಿಲ್ಲ" ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ "ವಿದೇಶಿ ವಸ್ತುಗಳ ಬಹಿಷ್ಕಾರ; ಸ್ವದೇಶಿ ವಸ್ತುಗಳ ಪುರಸ್ಕಾರ" ಚಳವಳಿಯಲ್ಲಿ ಧುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಜನರನ್ನು ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ, ಮಾದರಿಯಾದರು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನೂ ಮರೆಸುತ್ತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ, ನಮ್ಮ ಸಂಸ್ಕೃತಿಗಳನ್ನು ಪೋಷಿಸುವ 'ರಾಷ್ಟ್ರೀಯ ಶಿಕ್ಷಣ ಚಳವಳಿ'ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು. ವೆಂಕಟರಾಯರು ಈ ಚಳವಳಿಯಲ್ಲಿಯೂ ಧುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

**ಪ್ರಶ್ನೆಗಳು :**

43. ಅ) ಆಲೂರು ವೆಂಕಟರಾಯರು ಸ್ವದೇಶಿ ಚಳವಳಿಯ ಮೂಲಕ ಹೇಗೆ ಮಾದರಿ ಎನಿಸಿದರು?

ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ "ವಿದೇಶಿ ವಸ್ತುಗಳ ಬಹಿಷ್ಕಾರ; ಸ್ವದೇಶಿ ವಸ್ತುಗಳ ಪುರಸ್ಕಾರ" ಚಳವಳಿಯಲ್ಲಿ ಧುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಜನರನ್ನು ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ, ಮಾದರಿಯಾದರು.

43. ಬ) ಆಲೂರು ವೆಂಕಟರಾಯರು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು?

ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನೂ ಮರೆಸುತ್ತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ, ನಮ್ಮ ಸಂಸ್ಕೃತಿಗಳನ್ನು ಪೋಷಿಸುವ 'ರಾಷ್ಟ್ರೀಯ ಶಿಕ್ಷಣ ಚಳವಳಿ'ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು. ವೆಂಕಟರಾಯರು ಈ ಚಳವಳಿಯಲ್ಲಿಯೂ ಧುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ, ಪತ್ರ ಬರೆಯಿರಿ.** **1 * 5 = 5**

44. **ನಿಮ್ಮನ್ನು ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ರಾಮಾಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಶಿವಸ್ವಾಮಿ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಗೆ ಕುಡಿಯುವ ಶುದ್ಧ ನೀರಿನ ವ್ಯವಸ್ಥೆಯನ್ನು ಮಾಡಿಕೊಡುವಂತೆ ಕೋರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ.**

ಇಂದ

ಶಿವಸ್ವಾಮಿ
10 ನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ರಾಮಾಪುರ,
ಹನೂರು ತಾಲೂಕು
ಚಾಮರಾಜನಗರ ಜಿಲ್ಲೆ.

ದಿನಾಂಕ : 10–02–2021
ಸ್ಥಳ : ರಾಮಾಪುರ

ಇವರಿಗೆ

ಮಾನ್ಯ ಅಧ್ಯಕ್ಷರು
ರಾಮಾಪುರ ಗ್ರಾಮ ಪಂಚಾಯಿತಿ,
ರಾಮಾಪುರ,
ಹನೂರು ತಾಲೂಕು
ಚಾಮರಾಜನಗರ ಜಿಲ್ಲೆ.

ಮಾನ್ಯರೇ,

ವಿಷಯ : ಶಾಲೆಗೆ ಕುಡಿಯುವ ಶುದ್ಧನೀರಿನ ವ್ಯವಸ್ಥೆಯನ್ನು ಮಾಡಿಕೊಡುವಂತೆ ಕೋರಿ ಮನವಿ.

ನಮ್ಮ ಶಾಲೆಯಲ್ಲಿ ಸುಮಾರು 500 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ನಮ್ಮ ಶಾಲೆಯ ಆವರಣದಲ್ಲಿ ಕುಡಿಯುವ ಶುದ್ಧನೀರಿನ ವ್ಯವಸ್ಥೆಯು ಇರುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಅನೇಕ ವಿದ್ಯಾರ್ಥಿಗಳು ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ತಾವು ಈ ಬಗ್ಗೆ ಗಮನವನ್ನು ಹರಿಸಿ, ನಮ್ಮ ಶಾಲೆಯ ಆವರಣದಲ್ಲಿ ಕುಡಿಯುವ ಶುದ್ಧನೀರಿನ ವ್ಯವಸ್ಥೆಯನ್ನು ಗ್ರಾಮ ಪಂಚಾಯಿತಿ ವತಿಯಿಂದ ಮಾಡಿಸಿಕೊಡಬೇಕೆಂದು ಈ ಮೂಲಕ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ.

ತಮ್ಮ ನಂಬುಗೆಯ
ಸಹಿ/–
(ಶಿವಸ್ವಾಮಿ)

ಹೊರವಿಳಾಸ

| ಇಂದ | ಇವರಿಗೆ |
|---|---|
| ಶಿವಸ್ವಾಮಿ<br>10 ನೆಯ ತರಗತಿ,<br>ಸರ್ಕಾರಿ ಪ್ರೌಢಶಾಲೆ,<br>ರಾಮಾಪುರ,<br>ಹನೂರು ತಾಲೂಕು, ಚಾಮರಾಜನಗರ ಜಿಲ್ಲೆ. | ಮಾನ್ಯ ಅಧ್ಯಕ್ಷರು<br>ರಾಮಾಪುರ ಗ್ರಾಮ ಪಂಚಾಯಿತಿ,<br>ರಾಮಾಪುರ,<br>ಹನೂರು ತಾಲೂಕು<br>ಚಾಮರಾಜನಗರ ಜಿಲ್ಲೆ. |

**ಅಥವಾ**

**ನಿಮ್ಮನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕು ಸುತ್ತೂರಿನ ಜೆ. ಎಸ್. ಎಸ್. ವಸತಿ ಶಾಲೆಯ ವಿದ್ಯಾರ್ಥಿನಿ 'ನೀಲಾಂಬಿಕೆ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ವಿನಂತಿಸಿ, ಚಾಮರಾಜ ನಗರ ತಾಲೂಕು ಮತ್ತು ಜಿಲ್ಲೆಯ ಉಡೀಗಾಲ ಗ್ರಾಮದಲ್ಲಿ ವಾಸವಿರುವ 'ಕಲ್ಯಾಣಮ್ಮ' ಎಂಬ ಹೆಸರಿನ ತಾಯಿ ಅವರಿಗೆ ಪತ್ರ ಬರೆಯಿರಿ.**

ಕ್ಷೇಮ ಶ್ರೀ ನೀಲಾಂಬಿಕೆ

ಜೆ. ಎಸ್. ಎಸ್. ವಸತಿ ಶಾಲೆ,

ಸುತ್ತೂರು,

ನಂಜನಗೂಡು ತಾಲೂಕು

ಮೈಸೂರು ಜಿಲ್ಲೆ.

ದಿನಾಂಕ : 10–02–2021

ಪ್ರೀತಿಯ ಮಾತೃಶ್ರೀ ಅವರಿಗೆ ನಿಮ್ಮ ಮಗಳು ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು.

ಇಲ್ಲಿ ನಾನು ಕ್ಷೇಮವಾಗಿದ್ದೇನೆ. ಅಲ್ಲಿ ತಾವೆಲ್ಲರೂ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.

ನಾನು ಈ ಬಾರಿಯ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣ ಳಾಗಬೇಕೆಂಬ ಮಹದಾಸೆಯಿಂದ ಬಹು ಆಸಕ್ತಿಯಿಂದ ಪ್ರತಿನಿತ್ಯ ಬೆಳಿಗ್ಗೆ ಎದ್ದು, ವ್ಯಾಸಂಗ ಮಾಡುತ್ತಿದ್ದೇನೆ. ನಿಮ್ಮೆಲ್ಲರ ಬಯಕೆಯಂತೆ ಖಂಡಿತ ನಾನು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗುತ್ತೇನೆ ಎಂಬ ನಂಬಿಕೆ ನನಗಿದೆ.

ದಿನಾಂಕ 20–03–2021 ರಂದು ನಮ್ಮ ಶಾಲೆಯಲ್ಲಿ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವು ನಡೆಯುತ್ತದೆ. ಈ ಬಾರಿ ನಾನು ಜನಪದಗೀತೆ ವಿಭಾಗದಲ್ಲಿ ಮತ್ತು ರಂಗೋಲಿ ವಿಭಾಗದಲ್ಲಿ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತೇನೆ. ನಾನು ಜಿಲ್ಲಾಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. ತಾವು ತಂದೆಯವರೊಡನೆ ಬಂದು ನನ್ನ ಕಾರ್ಯಕ್ರಮವನ್ನು ನೋಡಿ, ನನ್ನನ್ನು ಪ್ರೋತ್ಸಾಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ನಿಮ್ಮೆಲ್ಲರ ಹಾರೈಕೆಯಿಂದ ಖಂಡಿತ ರಾಜ್ಯಮಟ್ಟಕ್ಕೆ ಆಯ್ಕೆಯಾಗುತ್ತೇನೆ ಎಂಬ ಆಶಾಭಾವನೆಯನ್ನು ಹೊಂದಿರುತ್ತೇನೆ.

ತಂದೆಯವರಿಗೂ ಮತ್ತು ಮನೆಯಲ್ಲಿರುವ ಸಹೋದರರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿ. ಎಲ್ಲಾ ವಿಷಯಕ್ಕೂ ಈ ಪತ್ರವನ್ನು ಕಂಡಕೂಡಲೆ ಮರುಪತ್ರವನ್ನು ಬರೆಯಿರಿ. ಈ ಪತ್ರದಲ್ಲಿ ತಪ್ಪುಗಳಿದ್ದರೆ ದಯವಿಟ್ಟು ಕ್ಷಮಿಸಿ. ನಿಮ್ಮ ಬರುವಿಕೆಗಾಗಿ ಕಾಯುತ್ತಿರುತ್ತೇನೆ.

ವಂದನೆಗಳೊಡನೆ.

ನಿಮ್ಮ ಪ್ರೀತಿಯ ಮಗಳು

ಸಹಿ/–

(ನೀಲಾಂಬಿಕೆ)

ಹೊರವಿಳಾಸ

| ಇಂದ | ಇವರಿಗೆ |
|---|---|
| ನೀಲಾಂಬಿಕೆ<br>ಜೆ. ಎಸ್. ಎಸ್. ವಸತಿ ಶಾಲೆ, ಸುತ್ತೂರು,<br>ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ. | ಶ್ರೀಮತಿ ಕಲ್ಯಾಣಮ್ಮ<br>ಉಡೀಗಾಲ<br>ಚಾಮರಾಜನಗರ ತಾಲೂಕು ಮತ್ತು ಜಿಲ್ಲೆ. |

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

1 * 5 = 5

45. **ಮಹಾಮಾರಿ ಕೊರೊನಾ (ಕೋವಿಡ್ 19) ಹಾವಳಿ.**

**ಪೀಠಿಕೆ :** ವಿಶ್ವದಲ್ಲೇ ಮೊದಲ ಬಾರಿಗೆ ಕ್ರಿ. ಶ. 2019 ರ ಡಿಸೆಂಬರ್ ನಲ್ಲಿ ಚೀನಾ ದೇಶದ ವ್ಯುಹಾನ್ ನಗರದಲ್ಲಿ ಮಹಾಮಾರಿ **'ಕೊರೊನಾ** (ಕೋವಿಡ್-೧೯)' ಎನ್ನುವ ಸೋಂಕು ರೋಗ ಪತ್ತೆಯಾಗಿ ಇಡೀ ವಿಶ್ವವನ್ನೇ ತಲ್ಲಣಗೊಳಿಸಿತು. ಪ್ರಪಂಚದಾದ್ಯಂತ ಕೋಟ್ಯಂತರ ಜನರು ಮಹಾಮಾರಿ ಕೊರೊನಾ ಸಾಂಕ್ರಾಮಿಕ ರೋಗದಿಂದ ಬಳಲಿದರು; ಲಕ್ಷಾಂತರ ಜನರು ದುರ್ಮರಣಕ್ಕೆ ಈಡಾದರು. ಪ್ರಪಂಚದ ಎಲ್ಲ ದೇಶಗಳು ಜನರನ್ನು ಮಹಾಮಾರಿ ಕೊರೊನಾದಿಂದ ರಕ್ಷಿಸಲು **'ಲಾಕ್ ಡೌನ್'** ಘೋಷಣೆ ಮಾಡಿದವು. ಇದರಿಂದ ಕೋಟ್ಯಂತರ ಜನರು ಉದ್ಯೋಗ ಕಳೆದುಕೊಂಡರು. ಉದ್ಯಮಗಳು ನಷ್ಟದಿಂದ ಮುಚ್ಚಲ್ಪಟ್ಟವು. ಎಲ್ಲ ದೇಶಗಳ ಆರ್ಥಿಕ ಪರಿಸ್ಥಿತಿಯು ಹದಗೆಟ್ಟಿತು. ಇದರಿಂದಾಗಿ ಜಗತ್ತಿನ ಇತಿಹಾಸದಲ್ಲಿ ಕ್ರಿ. ಶ 2020 ನೆಯ ಇಸವಿಯು ಒಂದು **'ಕರಾಳ ವರ್ಷ'** ಎಂದು ಕರೆಯಿಸಿಕೊಂಡಿತು.

**ವಿಷಯ ನಿರೂಪಣೆ :** 'ಮಹಾಮಾರಿ **ಕೊರೊನಾ** (ಕೋವಿಡ್-೧೯)' ಎನ್ನುವುದು ವೈರಸ್ಸಿನಿಂದ ಬರುವ ಒಂದು ಸೋಂಕು ರೋಗ. ಈ ವೈರಸ್‌ನಲ್ಲಿ ಕಿರೀಟದಲ್ಲಿ ಇರುವಂತಹ ಮುಳ್ಳುಗಳಂತಹ ರಚನೆಗಳು ಇರುವುದರಿಂದ **'ಕೊರೊನಾ'** ಎನ್ನುವ ಹೆಸರು ಬಂದಿದೆ. 'ಕೊರೊನಾ' ಎಂದರೆ ಲ್ಯಾಟಿನ್ ಭಾಷೆಯಲ್ಲಿ 'ಕಿರೀಟ' ಎಂದು ಅರ್ಥ. **ವಿಶ್ವ ಆರೋಗ್ಯ ಸಂಸ್ಥೆಯು ಹೇಳುವಂತೆ ಇದು ಪ್ರಮುಖವಾಗಿ** ಉಸಿರಾಟದ ಮೂಲಕ ಹರಡುತ್ತದೆ. ಈ ಸೋಂಕು ಇರುವ ರೋಗಿ ಕೆಮ್ಮಿದಾಗ ಅಥವಾ ಸೀನಿದಾಗ ಹೊರ ಚೆಲ್ಲುವ ಹನಿಗಳ ಮೂಲಕ ಹರಡುತ್ತದೆ. ಈ ಹನಿಗಳು ನೆಲದ ಮೇಲೋ ಅಥವಾ ಇನ್ಯಾವುದಾದರೂ ವಸ್ತುವಿನ ಮೇಲೋ ಬಿದ್ದಿರುತ್ತದೆ. ಅಂತಹ ವಸ್ತುವನ್ನು ಮುಟ್ಟಿದ ಕೈಯಿಂದಲೇ ನಾವು ಮೂಗು, ಕಣ್ಣು, ಬಾಯಿಯನ್ನು ಮುಟ್ಟಿದಾಗ ಇದು ನಮಗೂ ಹರಡುತ್ತದೆ. ಈ ಕೊರೊನಾ ವೈರಸ್ಸು ಬಾವಲಿಗಳಿಂದ ಬಂದಿರಬೇಕು ಎಂದು ನಂಬಲಾಗಿದೆ. ಹಲವು ಕಾರಣಗಳಿಂದಾಗಿ ಕೋವಿಡ್-19ರ ಬಗ್ಗೆ ನಾವು ಕಾಳಜಿ ವಹಿಸಬೇಕಾಗಿದೆ. ಮೊದಲನೆಯದಾಗಿ ಇದು ಒಬ್ಬರಿಂದ ಮತ್ತೊಬ್ಬ ವ್ಯಕ್ತಿಗೆ ಸುಲಭವಾಗಿ ಹರಡುವ ಸೋಂಕು. ಜೊತೆಗೆ ಇದು ಉಸಿರಾಟದ ತೊಂದರೆಯನ್ನು ಉಂಟುಮಾಡುತ್ತದೆ. ಎರಡನೆಯದಾಗಿ ಸೋಂಕು ತಗುಲಿದ ಕೆಲವರಿಗೆ ಇದು ಮಾರಕವಾಗಬಹುದು. ಮೂರನೆಯದಾಗಿ ನಮ್ಮ ದೇಹಕ್ಕೆ ಇದನ್ನು ತಡೆಯುವ ಸಹಜ ಸಾಮರ್ಥ್ಯ ಇಲ್ಲ. ಇದನ್ನು ತಡೆಯಬಲ್ಲ ಲಸಿಕೆಗಳೂ ಇಲ್ಲ ಮತ್ತು ಸದ್ಯಕ್ಕೆ ಅದನ್ನು ಗುಣಪಡಿಸುವ ಔಷಧಿಗಳೂ ಇಲ್ಲ. ಸೋಂಕು ತಗುಲಿದ ಬಹುತೇಕ ಜನರಿಗೆ ಫ್ಲೂ ಬಂದಾಗ ಕಾಣುವಂತಹ ಲಕ್ಷಣಗಳೇ ಇರುತ್ತವೆ. ಏರು ಜ್ವರ, ಒಣ ಕೆಮ್ಮು ಮತ್ತು ಸುಸ್ತು ಸಾಮಾನ್ಯ. ಕೆಲವರಿಗೆ ಮೈಕೈ ನೋವು, ಉಸಿರಾಟದ ತೊಂದರೆ, ಸ್ನಾಯುಗಳು ಹಾಗೂ ಸಂಧಿಗಳ ನೋವು, ಗಂಟಲುನೋವು, ತಲೆನೋವು, ಚಳಿ ಮತ್ತು ಒಮ್ಮೊಮ್ಮೆ ಬೇಧಿ ಕೂಡ ಕಾಣಿಸಬಹುದು ಈ ಖಾಯಿಲೆ ಮಕ್ಕಳು, ಯುವಕರಿಗಿಂತಲೂ ವಯಸ್ಸಾದವರನ್ನು ಹೆಚ್ಚು ಬಾಧಿಸುವಂತೆ ತೋರುತ್ತದೆ. ಆದರೆ ಸಕ್ಕರೆ ರೋಗ,  ಹೃದಯದ ತೊಂದರೆಗಳು, ಶ್ವಾಸಕೋಶದ ತೊಂದರೆಗಳು ಮತ್ತು ರೋಗ ನಿರೋಧಕ ಶಕ್ತಿ ಕಡಿಮೆ ಇರುವಂತಹವರಲ್ಲಿ ಇದರ ಪರಿಣಾಮ ಹೆಚ್ಚು. ಐದರಲ್ಲಿ ಒಬ್ಬ ರೋಗಿ ನ್ಯುಮೋನಿಯಾದಂತಹ ಬಲು ತೀವ್ರವಾದ ಸಂಕಟದಿಂದ ನರಳುತ್ತಾರೆ.

ಸರ್ಕಾರವು ಈ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ನಿರ್ದೇಶನಗಳನ್ನು ಪಾಲಿಸುತ್ತಿದ್ದು, ಆರೋಗ್ಯ ಸೇವೆಗಳ ಪ್ರತಿಯೊಂದು ಸ್ತರವನ್ನೂ ಈ ಗುರಿಯತ್ತ ನಿರ್ದೇಶಿಸಿದೆ. ಸೋಂಕಿನ ಸಂಖ್ಯೆಯನ್ನು ಪ್ರತಿದಿನವೂ ಗಣಿಸುವ ಆರೋಗ್ಯ ಮಂತ್ರಾಲಯವು, ವೈದ್ಯರುಗಳು ಹಾಗೂ ಆಸ್ಪತ್ರೆಗಳಿಗೆ ರೋಗಿಗಳನ್ನು ಪ್ರತ್ಯೇಕಿಸಿಟ್ಟು, ಚಿಕಿತ್ಸೆ ನೀಡುವ ಬಗ್ಗೆ ಸೂಚನೆಗಳನ್ನು ನೀಡುತ್ತಿದೆ. ಈ ಸೋಂಕು ತಗುಲಿರುವ ದೇಶಗಳ ಜನರು ನಮ್ಮ ದೇಶವನ್ನು

ಪ್ರವೇಶಿಸದಂತೆ ಅವರ ವೀಸಾಗಳನ್ನು ರದ್ದುಪಡಿಸಲಾಗಿದೆ. ಸೋಂಕು ಇರಬಹುದು ಎನ್ನುವ ಸಂದೇಹ ಇರುವವರನ್ನು ಪರೀಕ್ಷೆಗೊಳಪಡಿಸಲಾಗುತ್ತಿದೆ.

**ಉಪಸಂಹಾರ** : ನೀರು ಮತ್ತು ಸಾಬೂನು ಇಲ್ಲದಿದ್ದರೆ, ಮದ್ಯಸಾರ ಬೆರೆತ ಸ್ಯಾನಿಟೈಸರ್ ಅಥವಾ ಹ್ಯಾಂಡ್ ವಾಷ್ ಬಳಸಿ, ನಮ್ಮ ಕೈಯನ್ನು ಚೆನ್ನಾಗಿ ತೊಳೆದುಕೊಳ್ಳಬೇಕು. ನಮ್ಮ ಕೈಯಿಂದ ಮುಖವನ್ನು ಮುಟ್ಟುವುದನ್ನು ಆದಷ್ಟೂ ತಡೆಯುವುದು ಒಳ್ಳೆಯದು. ಇದಲ್ಲದೆ ಜನಜಂಗುಳಿ ಇರುವ ಕಡೆ ಹೋಗುವುದರಿಂದ ನೇರ ಸಂಪರ್ಕ ಹೆಚ್ಚಾಗಿ ಸೋಂಕು ತಗುಲುವ ಸಾಧ್ಯತೆಯೂ ಹೆಚ್ಚಾಗುತ್ತದೆ. ಆದ್ದರಿಂದ ಸಾಮಾಜಿಕ ಅಂತರ  ಕಾಪಾಡಿಕೊಳ್ಳಬೇಕು.. ಮೂರರಿಂದ ಆರು ಅಡಿ ದೂರ ಇರುವುದು ಸುರಕ್ಷಿತ. ಕೈ ಕುಲುಕುವುದರ ಬದಲು ದೂರದಿಂದ ನಮಸ್ಕರಿಸುವುದು ಉತ್ತಮ. ಮುಖಗವುಸು (ಮಾಸ್ಕ್) ನಮ್ಮನ್ನು ರಕ್ಷಿಸುವುದಕ್ಕಿಂತಲೂ ಬೇರೆಯವರಿಗೆ ನಮ್ಮಿಂದ ಸೋಂಕು ಹರಡದಂತೆ ತಡೆಯುತ್ತದೆ. ನಮಗೆ ಉಸಿರಾಟದ ತೊಂದರೆ, ನೆಗಡಿ ಇದೆ ಎಂದೇನಾದರೂ ಅನುಮಾನವಿದ್ದರೆ ಖಂಡಿತ ಮುಖಗವುಸನ್ನು ಬಳಸಲೇಬೇಕು. ಹಣ್ಣು-ಹಂಪಲುಗಳನ್ನು ತಿಂದು ರೋಗನಿರೋಧಕ ಶಕ್ತಿ ಹೆಚ್ಚುವಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

**ಅಥವಾ**

**ಸಾಮಾಜಿಕ ಪಿಡುಗುಗಳು**

**ಪೀಠಿಕೆ :-** ಸಮಾಜದ ಪ್ರಗತಿಗೆ ಅಥವಾ ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಅಡ್ಡಿಯನ್ನು ಉಂಟುಮಾಡುವ ಶಕ್ತಿಗಳನ್ನು 'ಸಾಮಾಜಿಕ ಪಿಡುಗುಗಳು' ಎನ್ನುವರು. ತಲೆತಲಾಂತರದಿಂದ ಸಮಾಜಕ್ಕೆ ಅಂಟಿಕೊಂಡು ಬಂದ ಸಾಮಾಜಿಕ ಪಿಡುಗುಗಳಿವೆ. ಜಾತೀಯತೆ, ವರದಕ್ಷಿಣೆ, ಸ್ತ್ರೀ ಶೋಷಣೆ, ಅಸ್ಪೃಶ್ಯತೆ, ಮಾದಕ ವಸ್ತುಗಳ ಸೇವನೆ, ಜೀತ ಪದ್ಧತಿ, ಬಾಲ ಕಾರ್ಮಿಕ ಪದ್ಧತಿ, ಮೂಢನಂಬಿಕೆಗಳು ಇತ್ಯಾದಿ. ಇವೆಲ್ಲವೂ ನಮ್ಮ ಸಮಾಜದಲ್ಲಿ ಬೇರು ಬಿಟ್ಟಿವೆ. ಹಾಗೂ ಯಾವ ಶಾಸನಕ್ಕೂ ಜಗ್ಗದಿವೆ. ಇವುಗಳಿಂದ ಸಾಮಾಜಿಕ ಸ್ವಾಸ್ಥ್ಯ ಕೆಟ್ಟು ಹೋಗುತ್ತದೆ. ಇವುಗಳು ಒಂದು ಸುಂದರ ನಾಗರಿಕ ಸಮಾಜ ನಿರ್ಮಾಣಕ್ಕೆ ಅಡ್ಡಿಯಾಗಿವೆ.

**ವಿಷಯ ನಿರೂಪಣೆ :** ಜಾತೀಯತೆಯಿಂದ ಮೇಲುಕೀಳು ಭಾವನೆಯುಂಟಾಗಿ ಜನರಲ್ಲಿ ದ್ವೇಷ, ಅಸೂಯೆ, ಅಶಾಂತಿ ಮೂಡಿ ದೇಶದ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸಿದೆ. ವರದಕ್ಷಿಣೆ ಎಂದರೆ ಮದುವೆಯ ಸಮಯದಲ್ಲಿ ಹೆಣ್ಣು ಹೆತ್ತವರು ಮದುವೆಯ ಗಂಡಿಗೆ ಕೊಡಬೇಕಾದ ದಕ್ಷಿಣೆ. ವರದಕ್ಷಿಣೆಯನ್ನು ಮೊದಮೊದಲು ಹೆಣ್ಣು ಹೆತ್ತವರು ಪ್ರೀತಿಯಿಂದ ಕೊಡುತ್ತಿದ್ದರು. ಕೊಡಲೇ ಬೇಕೆಂಬ ಒತ್ತಾಯವಿರಲಿಲ್ಲ. ಆದರೆ ಈಗ ಕಾಲ ಬದಲಾಗಿದೆ ವರದಕ್ಷಿಣೆ ಕೊಡುವುದು ಕಡ್ಡಾಯ ಎನ್ನುವಂತೆ ಆಗಿದೆ. ನಮ್ಮ ದೇಶದಲ್ಲಿ ಸ್ತ್ರೀ ಶೋಷಣೆಯು ಅವ್ಯಾಹತವಾಗಿ ನಡೆಯುತ್ತಿದೆ. ಸ್ತ್ರೀ ಭ್ರೂಣ ಹತ್ಯೆ, ದೇವದಾಸಿ ಪದ್ಧತಿ, ವೇಶ್ಯಾವಾಟಿಕೆ, ಅತ್ಯಾಚಾರಗಳಿಂದ ಹೆಣ್ಣು ಮಕ್ಕಳ ಬದುಕು ದುರ್ಬರವಾಗುತ್ತಿದೆ. 'ಅಸ್ಪೃಶ್ಯತೆ ಭಾರತಕ್ಕೆ ಅಂಟಿದ ಶಾಪ'. ಇದನ್ನು ಆಚರಿಸುವುದು ಮಹಾಪರಾಧ. ಮಾದಕ ವಸ್ತುಗಳ ಸೇವನೆಯಿಂದ ಇಂದಿನ ಯುವಜನಾಂಗ ದಾರಿತಪ್ಪುತ್ತಿದೆ. ಮದ್ಯಪಾನ, ಧೂಮಪಾನ, ಮಾದಕ ಪದಾರ್ಥಗಳ ಸೇವನೆಯ ದುಶ್ಚಟಗಳಿಂದ ಸಮಾಜದ ಶಾಂತಿಗೆ ಭಂಗವುಂಟಾಗುತ್ತಿದೆ. ಜೀತ ಪದ್ಧತಿಯಿಂದ ವ್ಯಕ್ತಿಯ ಶೋಷಣೆಯಾಗಿ ಸ್ವಾಭಿಮಾನಕ್ಕೆ ಧಕ್ಕೆಯನ್ನು ಉಂಟುಮಾಡುತ್ತದೆ. ಬಾಲಕಾರ್ಮಿಕ ಪದ್ಧತಿಯಿಂದ ಅನೇಕ ಮಕ್ಕಳು ತಮ್ಮ ಸುಂದರ ಬಾಲ್ಯವನ್ನು ಕಳೆದುಕೊಂಡು ಶೋಷಣೆಗೆ ಈಡಾಗುತ್ತಿದ್ದಾರೆ. ಮೂಢನಂಬಿಕೆಗಳು ಜನಸಾಮಾನ್ಯರ ಮಾನಸಿಕ ಶಾಂತಿಯನ್ನು ಕದಡುತ್ತಿವೆ. ಹೀಗೆ ಅನೇಕ ಸಾಮಾಜಿಕ ಪಿಡುಗುಗಳು ಸಮಾಜದ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತಿವೆ.

**ಉಪಸಂಹಾರ :** ನಾವು ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಸಾಮಾಜಿಕ ಪಿಡುಗುಗಳಿಂದಾಗುವ ಅನಾಹುತಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಬೇಕು. ಸರ್ಕಾರವು ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಜಾರಿಗೆ ತಂದಿರುವ ಕಾಯ್ದೆ-ಕಾನೂನುಗಳ ಬಗ್ಗೆ ಅರಿವನ್ನು ಪಡೆದುಕೊಳ್ಳಬೇಕು. ಪ್ರತಿಯೊಬ್ಬರಿಗೂ ಸಮಾನ ಶಿಕ್ಷಣ ದೊರೆಯುವಂತೆ ಅವಕಾಶ ಮಾಡಿಕೊಡಬೇಕು. ಸರ್ವಧರ್ಮ ಸಮಾನತೆ, ಜಾತ್ಯತೀತತೆ, ಮಾನವೀಯ ಮೌಲ್ಯಗಳನ್ನು ನಮ್ಮದಾಗಿಸಿಕೊಂಡಾಗ ಮಾತ್ರ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಸಾಧ್ಯ ಎಂಬುದು ನನ್ನ ಅಭಿಪ್ರಾಯವಾಗಿದೆ.

**ಹಂತ : 8. ಪ್ರಶ್ನಾನುಸಾರ ವಿಶ್ಲೇಷಣೆ.**

| ಮುಖ್ಯ ಪ್ರಶ್ನೆ ಸಂಖ್ಯೆ | ಪ್ರಶ್ನೆ ಸಂಖ್ಯೆ | ಘಟಕದ ಹೆಸರು | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|---|---|
| I | 1 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 02 ನಿಮಿಷಗಳು |
| | 2 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 02 ನಿಮಿಷಗಳು |
| | 3 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 02 ನಿಮಿಷಗಳು |
| | 4 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 02 ನಿಮಿಷಗಳು |
| | 5 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 02 ನಿಮಿಷಗಳು |
| | 6 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 02 ನಿಮಿಷಗಳು |
| II | 7 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 02 ನಿಮಿಷಗಳು |
| | 8 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 02 ನಿಮಿಷಗಳು |
| | 9 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 02 ನಿಮಿಷಗಳು |
| | 10 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 02 ನಿಮಿಷಗಳು |
| III | 11 | ಶಬರಿ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 02 ನಿಮಿಷಗಳು |
| | 12 | ವ್ಯಾಘ್ರಗೀತೆ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 02 ನಿಮಿಷಗಳು |
| | 13 | ವ್ಯಾಘ್ರಗೀತೆ | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 02 ನಿಮಿಷಗಳು |
| | 14 | ವೃಕ್ಷಸಾಕ್ಷಿ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 02 ನಿಮಿಷಗಳು |
| | 15 | ಹಲಗಲಿ ಬೇಡರು | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 02 ನಿಮಿಷಗಳು |
| | 16 | ಹಸುರು | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 02 ನಿಮಿಷಗಳು |
| | 17 | ಸ್ವಾಮಿ ವಿವೇಕಾನಂದರ ಚಿಂತನೆಗಳು | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 02 ನಿಮಿಷಗಳು |
| IV | 18 | ಯುದ್ಧ | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ಕಿರು ಉತ್ತರ 2 | 2 | ಸಾಧಾರಣ | 03 ನಿಮಿಷಗಳು |
| | 19 | ಭಾಗ್ಯಶಿಲ್ಪಿಗಳು | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ಕಿರು ಉತ್ತರ 2 | 2 | ಸಾಧಾರಣ | 03 ನಿಮಿಷಗಳು |
| | 20 | ಎದೆಗೆ ಬಿದ್ದ ಅಕ್ಷರ | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ಕಿರು ಉತ್ತರ 2 | 2 | ಸಾಧಾರಣ | 03 ನಿಮಿಷಗಳು |
| | 21 | ವೃಕ್ಷಸಾಕ್ಷಿ | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ಕಿರು ಉತ್ತರ 2 | 2 | ಸಾಧಾರಣ | 03 ನಿಮಿಷಗಳು |
| | 22 | ಸಂಕಲ್ಪಗೀತೆ | ಗ್ರಹಿಕೆ | ವಿವರಿಸುವುದು. | ಕಿರು ಉತ್ತರ 2 | 2 | ಸುಲಭ | 03 ನಿಮಿಷಗಳು |

| | | | | | | | | |
|---|---|---|---|---|---|---|---|---|
| | 23 | ಕೌರವೇಂದ್ರನ ಕೊಂದೆ ನೀನು | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ಕಿರು ಉತ್ತರ 2 | 2 | ಸಾಧಾರಣ | 03 ನಿಮಿಷಗಳು |
| | 24 | ಸ್ವಾಮಿ ವಿವೇಕಾನಂದರ ಚಿಂತನೆಗಳು | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ಕಿರು ಉತ್ತರ 2 | 2 | ಸಾಧಾರಣ | 03 ನಿಮಿಷಗಳು |
| | 25 | ವಸಂತ ಮುಖ ತೋರಲಿಲ್ಲ | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ಕಿರು ಉತ್ತರ 2 | 2 | ಸಾಧಾರಣ | 03 ನಿಮಿಷಗಳು |
| | 26 | ಭಗತ್ ಸಿಂಗ್ | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ಕಿರು ಉತ್ತರ 2 | 2 | ಸಾಧಾರಣ | 03 ನಿಮಿಷಗಳು |
| | 27 | ಜನಪದ ಒಗಟುಗಳು | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ಕಿರು ಉತ್ತರ 2 | 2 | ಸುಲಭ | 03 ನಿಮಿಷಗಳು |
| V | 28 | ಯುದ್ಧ | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ದೀರ್ಘ ಉತ್ತರ 1 | 3 | ಸುಲಭ | 05 ನಿಮಿಷಗಳು |
| | 29 | ಕೌರವೇಂದ್ರನ ಕೊಂದೆ ನೀನು | ಗ್ರಹಿಕೆ | ಗ್ರಹಿಸಿ ಉತ್ತರಿಸುವುದು | ದೀರ್ಘ ಉತ್ತರ 1 | 3 | ಸುಲಭ | 05 ನಿಮಿಷಗಳು |
| VI | 30 | ಛಂದಸ್ಸು | ಗ್ರಹಿಕೆ | ಪ್ರಸ್ತಾರ ಹಾಕುವುದು | ದೀರ್ಘ ಉತ್ತರ 1 | 3 | ಸಾಧಾರಣ | 05 ನಿಮಿಷಗಳು |
| VII | 31 | ಅಲಂಕಾರ | ಗ್ರಹಿಕೆ | ಸಮನ್ವಯಗೊಳಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 05 ನಿಮಿಷಗಳು |
| VIII | 32 | ಗಾದೆಯನ್ನು ವಿಸ್ತರಿಸಿ ಬರೆಯುವುದು | ಅಭಿವ್ಯಕ್ತಿ | ವಿಸ್ತರಿಸಿ ಬರೆಯುವುದು | ದೀರ್ಘ ಉತ್ತರ 1 | 3 | ಸಾಧಾರಣ | 05 ನಿಮಿಷಗಳು |
| IX | 33 | ಭಾಗ್ಯಶಿಲ್ಪಿಗಳು | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 05 ನಿಮಿಷಗಳು |
| | 34 | ಎದೆಗೆ ಬಿದ್ದ ಅಕ್ಷರ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 05 ನಿಮಿಷಗಳು |
| | 35 | ವ್ಯಾಘ್ರಗೀತೆ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಕಠಿಣ | 05 ನಿಮಿಷಗಳು |
| | 36 | ಸಂಕಲ್ಪಗೀತೆ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 05 ನಿಮಿಷಗಳು |
| | 37 | ಹಲಗಲಿಯ ಬೇಡರು | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಕಠಿಣ | 05 ನಿಮಿಷಗಳು |
| | 38 | ಹಸುರು | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 05 ನಿಮಿಷಗಳು |
| X | 39 | ಹಕ್ಕಿ ಹಾರುತಿದೆ ನೋಡಿದಿರಾ? | ಸ್ಮರಣೆ | ಪದ್ಯವನ್ನು ಪೂರ್ಣಗೊಳಿಸುವುದು | ದೀರ್ಘ ಉತ್ತರ 2 | 4 | ಸುಲಭ | 05 ನಿಮಿಷಗಳು |
| XI | 40 | ಛಲಮನೆ ಮೆರೆವೆಂ | ಪ್ರಸಂಶೆ | ಸಾರಾಂಶವನ್ನು ಬರೆಯುವುದು | ದೀರ್ಘ ಉತ್ತರ 2 | 4 | ಕಠಿಣ | 09 ನಿಮಿಷಗಳು |
| XII | 41 | ಶಬರಿ | ಅಭಿವ್ಯಕ್ತಿ | ಸ್ವಂತವಾಕ್ಯಗಳಲ್ಲಿ ವಿವರಿಸುವುದು | ದೀರ್ಘ ಉತ್ತರ 2 | 4 | ಸಾಧಾರಣ | 09 ನಿಮಿಷಗಳು |
| | 42 | ವೀರಲವ | ಅಭಿವ್ಯಕ್ತಿ | ಸ್ವಂತವಾಕ್ಯಗಳಲ್ಲಿ ವಿವರಿಸುವುದು | ದೀರ್ಘ ಉತ್ತರ 2 | 4 | ಸಾಧಾರಣ | 09 ನಿಮಿಷಗಳು |
| XIII | 43 | ಅಪಠಿತ ಗದ್ಯ | ಗ್ರಹಿಕೆ | ವಿವರಿಸುವುದು | ದೀರ್ಘ ಉತ್ತರ 2 | 4 | ಸುಲಭ | 09 ನಿಮಿಷಗಳು |
| XIV | 44 | ಪತ್ರಲೇಖನ | ಅಭಿವ್ಯಕ್ತಿ | ಸ್ವಂತವಾಕ್ಯಗಳಲ್ಲಿ ವಿವರಿಸುವುದು | ದೀರ್ಘ ಉತ್ತರ 3 | 5 | ಸುಲಭ | 10 ನಿಮಿಷಗಳು |
| XV | 45 | ಪ್ರಬಂಧ ಲೇಖನ | ಅಭಿವ್ಯಕ್ತಿ | ಸ್ವಂತವಾಕ್ಯಗಳಲ್ಲಿ ವಿವರಿಸುವುದು | ದೀರ್ಘ ಉತ್ತರ 3 | 5 | ಸಾಧಾರಣ | 10 ನಿಮಿಷಗಳು |
| | | ಒಟ್ಟು | | | | 100 | | 180 + 15 ನಿಮಿಷಗಳು |

– : ಶುಭವಾಗಲಿ : –